ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 23 ಜೂನ್ 8, 1986 ಬೆಲೆ 80 ಪೈಸೆ

ಒಳಗೇನಿದೆ........?

ಭಾಷಾ ವಿವಾದವನ್ನು
ಚಳುವಳಿಯಿಂದ ಬಗೆಹರಿಸಲಾಗದು

—ಎಸ್. ಸೂರ್ಯನಾರಾಯಣರಾವ್ ಸ್ಪಷ್ಟನೆ

ದಿನಾಂಕ 2-6-86ರಂದು ಮುಖ್ಯ ಮಂತ್ರಿಗಳು ಬೆಳಗಾಂ ಘಟನೆಗಳ ಬಗ್ಗೆ ಕರೆದಿದ್ದ ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಕಾ. ಸೂರ್ಯನಾರಾಯಣರಾವ್‌ರವರು ಮಾತನಾಡುತ್ತಾ ಈ ರೀತಿ ತಿಳಿಸಿದರು.

ಈ ಸಭೆಯಲ್ಲಿ ವಿಷಯವನ್ನು ಮಂಡಿಸುತ್ತಾ ಮುಖ್ಯ ಮಂತ್ರಿಗಳು ಗಡಿ ಪ್ರದೇಶದಲ್ಲಿ ಭಾಷಾ ಕಲಿಕೆಯ ಬಗ್ಗೆ ಅಲ್ಪ ಸಂಖ್ಯಾತರ ಕಮಿಷನ್ ಪ್ರಾಥಮಿಕ ಮೂರನೇ ತರಗತಿಯಿಂದ ಮಾತ್ರ ಆಯಾ ರಾಜ್ಯದ ಭಾಷೆಯನ್ನು ಕಲಿಸಬೇಕೆಂದು ಹೇಳಿದ್ದಾರೆ. ಕರ್ನಾಟಕ - ಮಹಾಪ್ಟ್ರ ಗಡಿ ಪ್ರದೇಶದ ಭಾಷಾ ವಿವಾದದ ಬಗ್ಗೆ ಕೇಂದ್ರದ ಗೃಹ ಮಂತ್ರಿ ಬೂಟಾ ಸಿಂಗ್‌ರವರನ್ನು ಸಂಪರ್ಕಿಸಿದಾಗ ಗಡಿ ಪ್ರದೇಶದಲ್ಲಿ ಭಾಷಾ ಕಲಿಕೆಯನ್ನು ಕಡ್ಡಾಯ ಮಾಡುವ ಪ್ರಶ್ನೆಯನ್ನು ಚಳುವಳಿ ಮಾಡುವ ದೃಷ್ಟಿಯಿಂದ ಮುಂದಕ್ಕೆ ಹಾಕಬೇಕೆಂದು ಸೂಚಿಸಿದ್ದಾರೆ ಎಂದು ತಿಳಿಸಿದರೆಂದರು.

ಈ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಕಾಂ. ಸೂರ್ಯನಾರಾಯಣ ರಾವ್‌ರವರು, ಇಂದು ದೇಶದ ಸಮಗ್ರತೆ, ಐಕ್ಯತೆಯ ಪ್ರಶ್ನೆ ದೇಶದ ಮುಂದಿದೆ. ಅಸ್ಸಾಂ ಚಳುವಳಿ, ಪಂಜಾಬ್ ಪರಿಸ್ಥಿತಿಯಿಂದಾಗಿ ದೇಶದಲ್ಲಿ ಮೂಡುತ್ತಿರುವ ವಾತಾವರಣದಲ್ಲಿ ಎಲ್ಲಾ ಭಾಷೆಗಳ, ಎಲ್ಲಾ ಮತಗಳ ಜನರ ಐಕ್ಯತೆಯನ್ನು ಬಲಪಡಿಸಬೇಕೇ ಹೊರತು ಭಾಷೆಯಂತಹ ವಿಷಯದಲ್ಲಿ ಭಾವೋದ್ರೇಕದಿಂದ ವರ್ತಿಸುವುದು ಸರಿಯಲ್ಲ. ಗಡಿ ಪ್ರದೇಶದಲ್ಲಿ ಭಾಷಾ ಕಲಿಕೆಯನ್ನು ಕಡ್ಡಾಯ ಮಾಡುವ ವಿಷಯದಲ್ಲಿ ಬೂಟಾಸಿಂಗರ ಸಲಹೆ ಸೂಕ್ತವಾಗಿದೆ, ಭಾಷಾ ಅಲ್ಪ ಸಂಖ್ಯಾತರಿಗೆ ಭಾಷೆಗಳನ್ನು ಕಲಿಸುವ ವಿಚಾರದಲ್ಲಿ ವಿವಿಧ ರಾಜ್ಯಗಳ ಗಡಿ ಪ್ರದೇಶದಲ್ಲಿ ಯಾವ ನೀತಿಯನ್ನು ಅನುಸರಿಸಲಾಗುತ್ತಿದೆ ಎಂಬ ಬಗ್ಗೆ ವಿವರ ಮಾಹಿತಿಯನ್ನು ಪಡೆಯಬೇಕು. ಆದುದರಿಂದ ಸರ್ಕಾರ ಈ ವಿವರಗಳನ್ನು ಸಂಗ್ರಹಿಸಿ, ಸಭೆ ಕರೆದು, ಅಂತಿಮ ನಿರ್ಣಯ ತೆಗೆದುಕೊಳ್ಳಬೇಕು.

ಕರ್ನಾಟಕ ಸರ್ಕಾರ ಇಂತಹ ಗಂಭೀರ ಪ್ರಶ್ನೆಯನ್ನು ಭಾವನಾತ್ಮಕ ವ್ಯಕ್ತಿಗಳ ಒತ್ತಾಸೆಯಿಂದ ತೀರ್ಮಾನ ಮಾಡದೆ, ದೇಶದ ಸಮಗ್ರತೆಯನ್ನು ರಕ್ಷಿಸುವ ರಾಷ್ಟ್ರೀಯ ದೃಷ್ಟಿ ಕೋನ ಸಂಖ್ಯಾತರ ಹಿತರಕ್ಷಣೆಯನ್ನು ಮಾಡದಿಂದ ನಿರ್ಣಯಿಸಬೇಕು. ಭಾಷಾ ಅಲ್ಪ ಬೇಕು.

ಮಾಸ್ತಿ ನಿಧನ—ಸಂತಾಪ ಸೂಚನೆ

ನವೋದಯ ಸಾಹಿತ್ಯದ ಆರಂಭ ಘಟ್ಟದಲ್ಲಿಯೇ ಸಾಹಿತ್ಯ ರಚನೆಗೆ ತೊಡಗಿದ ಮಾಸ್ತಿ ವೆಂಕಟೇಶ ಐಯ್ಯಂಗಾರ್‌ರವರು ಅವರ ಸಣ್ಣ ಕತೆಗಳ, ಕಾದಂಬರಿಗಳ ಮೂಲಕ, ಕಾಕನ ಕೋಟೆಯಂತಹ ನಾಟಕಗಳ ಮೂಲಕ, ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಇವರ ಚಿಕ್ಕವೀರ ರಾಜೇಂದ್ರ ಕೃತಿಗೆ ಇತ್ತೀಚೆಗೆ ಜ್ಞಾನ ಪೀಠ ಪ್ರಶಸ್ತಿ ದೊರೆತಿದೆ.

ಕನ್ನಡ ಮಾತೃ ಭಾಷೆಯಲ್ಲದಿದ್ದರೂ ಕನ್ನಡ ಭಾಷೆಯ ಬೆಳವಣಿಗೆಯ, ಕರ್ನಾಟಕ ಏಕೀಕರಣದ ಬಗ್ಗೆ ಮೊದಲು ದನಿಯೆತ್ತಿ ಆ ಬಗ್ಗೆ ಜನರಲ್ಲಿ ಎಚ್ಚರವನ್ನು ಮೂಡಿಸಿದ ವ್ಯಕ್ತಿಗಳಲ್ಲಿ ಪ್ರಮುಖರಲ್ಲೊಬ್ಬರು.

ಇವರ ನಿಧನದಿಂದ ಕನ್ನಡ ಸಂಸ್ಕೃತಿಗೆ ಅಪೂರ್ವ ಕಾಣಿಕೆಯನ್ನಿತ್ತ ಹಿರಿಯರೊಬ್ಬರನ್ನು ಕಳೆದು ಕೊಂಡಂತಾಯಿತು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಘಟಕ ಸಂತಾಪ ವ್ಯಕ್ತಪಡಿಸುತ್ತದೆ.

ಸಂಪಾದಕೀಯ

ಜನತಾ ಸರಕಾರದ ಪೋಲೀಸು ಧೋರಣೆ

ರೈತ - ಕಾರ್ಮಿಕರ ಹೋರಾಟಗಳ ಮೇಲೆ ದಾಳಿ

ಒಂದು ದಿನ 1983 ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಶ್ರೀ ರಾಮಕೃಷ್ಣ ಹೆಗಡೆಯವರು ಅಧಿಕಾರ ಸ್ವೀಕಾರಮಾಡಿದ ಸುಮಾರಿನಲ್ಲಿ ವಿಧಾನ ಸಭೆಯಲ್ಲಿ ತನ್ನ ನೇತೃತ್ವದ ಜನತಾ ಪಕ್ಷದ ಆಡಳಿತೆಯ ವೈಖರಿಯನ್ನು ವಿವರಿಸುತ್ತಾ, ಹೀಗೆ ಹೇಳಿದ್ದರು. "ರಾಜ್ಯದಲ್ಲಿ ಕಾಂಗ್ರೆಸ್ (ಐ) ಆಡಳಿತೆಯು ಚೂರಿ ಚಾಕು ಸಂಸ್ಕೃತಿಗೆ ಕುಖ್ಯಾತವಾಗಿತ್ತು. ಅದನ್ನು ನಾವು ಕೊನೆಗೊಳಿಸುತ್ತೇವೆ. ಈ ತನಕ ಸತತವಾಗಿದ್ದ ಕಾಂಗ್ರೆಸ್ಸು ಸರಕಾರ, ಅದರಲ್ಲೂ ಗುಂಡೂರಾವ್ ನೇತೃತ್ವದ ಸರಕಾರ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಮತ್ತು ಯುವಕರು ತಮ್ಮ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿದಾಗ ಲಾಟಿ ಗುಂಡು ಧಾರಾಳವಾಗಿ ಉಪಯೋಗಿಸುತ್ತಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ, ನಾವು ಈ ಜವಾಬ್ದಾರಿಯುತ ವಿಧಾನ ಸಭೆಗೆ ಜನತೆಯ ವಿವಿಧ ವಿಭಾಗಗಳು ತಮ್ಮನ್ನು ಭಾದಿಸುವ ಪ್ರಶ್ನೆಗಳ ಕುರಿತು ಸಾಮೂಹಿಕವಾಗಿ ಹೋರಾಟ ನಡೆಸುವಾಗ ಖಂಡಿತವಾಗಿಯೂ ಬಲತ್ಕಾರವನ್ನು ಉಪಯೋಗಿಸುವುದಿಲ್ಲವೆಂದು ಭರವಸೆ ಕೊಡುತ್ತೇವೆ."

ಇದೀಗ 1986 ಜೂನ್. ರಾಮಕೃಷ್ಣ ಹೆಗಡೆಯವರ ಪೋಲೀಸ್ ಧೋರಣೆಯು ಅವರ 1983 ರ ಭರವಸೆಗನ್ವಯ ಜ್ಯಾರಿಯಾಗುತ್ತಿದೆಯೆ? ಅಥವಾ ಅದು ನಿಧಾನವಾಗಿ ತನ್ನ ಹಳೆಯ ಜಾಡಿನಲ್ಲೇ ಮುಂದುವರಿಯುತ್ತಿದೆಯೇ ಎಂಬುದನ್ನು ಪರಿಶೀಲಿಸಲು ಯೋಗ್ಯ ಸಮಯ. ಜನತಾ ಪಕ್ಷದ ಒಂದು ಮಿತ್ರಪಕ್ಷವಾಗಿ ನಾವು ಸ್ವಲ್ಪ ಪರೀಕ್ಷಿಸೋಣ.

ಒಂದನೇಯದಾಗಿ ಚಾಕು ಚೂರಿ ಉಪಯೋಗ ಕಡಿಮೆಯಾಗಿ ಜನಸಾಮಾನ್ಯರು ಈ ಚಾಕು ಚೂರಿ ಪೋಕರಿಪುಂಡರ ಹಾವಳಿಯಿಂದ ಭಯ-ರಹಿತರಾಗಿದ್ದಾರೆಯೇ ಎಂದು ನೋಡಿದರೆ ಈಗಲೂ ರಾಜ್ಯದ ಕೇಂದ್ರವಾದ ಬೆಂಗಳೂರು ಮಹಾನಗರದಲ್ಲಾಗಲೀ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ಪೇಟೆ ಪಟ್ಟಣಗಳ ಸರಹದ್ದಿನಲ್ಲಾಗಲೀ, ಗ್ರಾಮಾಂತರದ ಸರಹದ್ದಿನಲ್ಲಾಗಲೀ ಈ ಭಯ ಹೋಗಲಿಲ್ಲ. ಅಂತವರಿಗೆ ದೊಂಕು ಸಲಾಮು ಹೊಡೆದೇ ಅಂತವರಿಗೆ ನಿತ್ಯ ಕಾಣಿಕೆ ಕೊಟ್ಟೇ ಜನರು ಬದುಕಬೇಕಾಗಿದೆ. ಹಾಡಹಗಲಲ್ಲೇ ದರೋಡೆಗಳು ಎಲ್ಲೆಡೆ ನಡೆಯುತ್ತಿವೆ. ಖೂನಿಗಳು ನಡೆಯುತ್ತಿವೆ. ಉದಾಹರಣೆಗೆ ಮಂಗಳೂರಿನಲ್ಲಿ ಪಾಂಡೇಶ್ವರ, ಜಪ್ಪು, ಮಹಾನವಮಿ ಕಟ್ಟೆ ಪ್ರದೇಶಗಳಲ್ಲಿ ಮತ್ತು ಬೆಂಗಳೂರಿನ ಹೆಚ್ಚಿನ ಬೀದಿಗಳಲ್ಲಿ.... ಒಂದೆರಡು ತಿಂಗಳುಗಳ ಹಿಂದೆ ಅಂತೂ ಈ ಬೆದರಿಕೆ ಸಾರ್ವತ್ರಿಕವಾಗಿತ್ತು. ಆಗ ಜನರು "ಶಿವರಾತ್ರಿ ಜಾಗರಣೆ"ಯನ್ನು ನಿತ್ಯವೂ ಮಾಡುತ್ತಿದ್ದರು.

(ಕೊನೆಯ ಪುಟಕ್ಕೆ)

ಬಂಡವಾಳಶಾಹಿ ಪಕ್ಷಗಳಲ್ಲಿ ಅಂತರಿಕ ಜಗಳ

ಎನ್. ಕೆ. ಉಪಾಧ್ಯಾಯ

ಕಾಂಗ್ರೈ, ಜನತಾ ಪಾರ್ಟಿ ಹಾಗೆಯೆ ಇತರ ಬಂಡವಾಳಶಾಹಿ ಪಕ್ಷಗಳು ತಮ್ಮ ಆಂತರಿಕ ಜಗಳಗಳಲ್ಲಿ ಮುಳುಗುತ್ತಿವೆ. ಅವುಗಳಲ್ಲಿ ಗಂಭೀರವಾದ ಭಿನ್ನಾಭಿಪ್ರಾಯಗಳು ಬೆಳೆದು ಬರುತ್ತಿವೆ,ಎದ್ದು ಕಾಣುತ್ತಿವೆ. ಆ ಕಾರಣದಿಂದಾಗಿಜನರ ಮಧ್ಯೆ ಆ ಪಕ್ಷಗಳ ಕುಂತುಅಭಿಪ್ರಾಯ ಬದಲಾಗುತ್ತಿದೆ.

ಬಂಡವಾಳಶಾಹಿ ಪಕ್ಷಗಳಲ್ಲಿ ಆಂತರಿಕ ಜಗಳದ ಹೊಗೆಯಾಡುತ್ತಿದೆಂದು ಸಿ.ಪಿ.ಐ (ಎಂ) ಪಕ್ಷದ 12ನೆಯ ಅಧಿವೇಶನದ ರಾಜಕೀಯ ನಿರ್ಣಯ ಸ್ಪಷ್ಟವಾಗಿ ಸೂಚಿಸಿತ್ತು.

"ರಾಜೀವ ಗಾಂಧಿಯವರುಹೊಸತು ಮಾಡಿ ತೋರಿಸುತ್ತಾರೆಂಬ ಅಭಿಲಾಷೆಯಿಂದ ಜನರು ಕಾಂಗ್ರೈಗೆ ಮತ ನೀಡಿ ಗೆಲಿಸಿದರು. ಆದರೆ ಅಂಥ ವಿಜಯ ಕಾಂಗ್ರೆಸ್ಸಿನ ಅವನತಿಯನ್ನು ತಡೆಯಲು ಸಾಧ್ಯವಾಗಲಿಲ್ಲ. ಆಳುವಪಕ್ಷದಲ್ಲಿದ್ದ ಆಂತರಿಕ ಜಗಳ, ಭಿನ್ನಾಭಿಪ್ರಾಯಗಳನ್ನು ಅದು ತಡೆಯಲಿಲ್ಲ. ಅದರ ರಾಜ್ಯ ಮಂತ್ರಿಮಂಡಲಗಳು ಭದ್ರವಾಗಿಲ್ಲ. ಲೋಕಸಭೆಯ ಬಹುಮತ ಭದ್ರವೆಂದಾಗಲೀ, ಅದರಲ್ಲಿ ಒಡಕುಂಟಾಗುವುದಿಲ್ಲೆಂದಾಗಲೀ, ರಾಜೀವ ಗಾಂಧಿಯವರ ನೇತೃತ್ವದಲ್ಲಿ ಐಕ್ಯತೆ ಬೆಳೆಯುತ್ತದೆಂದಾಗಲೀ ತಿಳಿಯಬಾರದು. ಬಂಡವಾಳಶಾಹಿ ಭೂಮಾಲಿಕರ ಗುಂಪಿನಲ್ಲಿರುವ ತಿಕ್ಕಾಟದಿಂದ ಕೆಲವು ಸಲಭಿನ್ನಾಭಿಪ್ರಾಯಗಳು ತೀವ್ರಗೊಂಡು ಮುಖ್ಯಮಂತ್ರಿಗಳ ಬದಲಾವಣೆಗೆ ಕಾರಣವಾಗುತ್ತದೆ. ಆಳುವ ಪಕ್ಷದಲ್ಲಿ ಭಿನ್ನಾಭಿಪ್ರಾಯ ಮತ್ತುಬಗೆಬಗೆಯ ಅಪೇಕ್ಷೆಗಳು ಆ ಪಕ್ಷ ಪ್ರಜಾಪ್ರಭುತ್ವ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ತಡೆಯುಂಟು ಮಾಡುತ್ತಿದೆ. ಸಂಘಟನೆಯಲ್ಲಿ ಸರ್ವಾಧಿಕಾರ ಮುಂದುವರಿದಿದೆ. ಹಲವಾರು ವರ್ಷಗಳಿಂದ ಪಕ್ಷದ ಚುನಾವಣೆ ನಡೆದಿಲ್ಲ ಅದರ ರಾಜ್ಯ ಸರಕಾರಗಳಲ್ಲಿ ಮಂತ್ರಿಮಂಡಲಗಳು ಭಿನ್ನಾಭಿಪ್ರಾಯ ಹೊಂದಿವೆ" ಎಂದು ವಿವರಿಸಿದೆ.

"ನಮ್ಮ ದೇಶವನ್ನು ಆಳುತ್ತಿರುವ ಕಾಂಗ್ರೈಯ ಬಂಡವಾಳಶಾಹಿ ಸರನೀತಿಯ ಬಿಕ್ಕಟ್ಟು ದೇಶದ ಆರ್ಥಿಕತೆಯನ್ನು ನಾಶಮಾಡಿದೆ. ದೇಶದ ಮುಂದಿರುವ ಸಮಸ್ಯೆಗಳನ್ನು ಪರಿಹರಿಸಲು ಅದರ ರಾಜಕೀಯ ಸಂಸ್ಥೆಗಳು ವಿಫಲಗೊಂಡಿವೆ. ಆಳುವ ಪಕ್ಷ ಆಂತರಿಕ ಜಗಳ ಮತ್ತುಗುಂಪುಗಾರಿಕೆಗಳಿಂದ ತುಂಬಿದೆ.

"ಆಳುವ ಪಕ್ಷ ತನ್ನ ಜನತಾ ವಿರೋಧಿ ರಾಷ್ಟ್ರವಿರೋಧಿ ಧೋರಣೆಗಳಿಂದಾಗಿ ಉಂಟಾಗಿರುವ ಆಳವಾದ ಬಿಕ್ಕಟ್ಟಿನಿಂದ ದೇಶವನ್ನು ಪಾರುಮಾಡಲು ಬಂಡವಾಳಶಾಹಿ ವಿರೋಧ ಪಕ್ಷಗಳು ಅಸಮರ್ಥವಾಗಿವೆ. ಆಳುವ ಪಕ್ಷಕ್ಕೆ ಪರ್ಯಾಯವಾಗಿ ಬೆಳೆಯುವಂಥ ಯಾವುದೇ ಆರ್ಥಿಕ ಸಾಮಾಜಿಕ ಕಾರ್ಯಕ್ರಮವನ್ನು ವಿರೋಧ ಪಕ್ಷಗಳು ಹೊಂದಿಲ್ಲ. ದೇಶದ ಯೋಜನಾಬದ್ಧ ಬೆಳವಣಿಗೆಯ ಕುರಿತು ಅವರ ಅಭಿಪ್ರಾಯ ಆಳುವ ಪಕ್ಷದ ಅಭಿಪ್ರಾಯಕ್ಕೆ ಏನೂ ವ್ಯತ್ಯಾಸವಿಲ್ಲ. ಆಳುವ ಪಕ್ಷದ ಕಾರ್ಯಕ್ರಮಕ್ಕೆ ಪರ್ಯಾಯವಾಗಬಲ್ಲ ಯಾವುದೇ ಸಾಮಾಜಿಕ-ಆರ್ಥಿಕ ಕಾರ್ಯಕ್ರಮವನ್ನು ಯಾವೊಂದು ವಿರೋಧ ಪಕ್ಷವೂ ಹೊಂದಿಲ್ಲ. ಅವುಗಳಲ್ಲಿ ಕೆಲವು ಪಕ್ಷಗಳ ಕಾರ್ಯಕ್ರಮಗಳು ರಾಷ್ಟ್ರವಿರೋಧಿಗಳಿಗೂ, ಜಾತೀಯ, ಧರ್ಮೀಯ, ಪ್ರತ್ಯೇಕತಾವಾದಿ ಗುಂಪುಗಳಿಗೂ ಬೆಂಬಲ ನೀಡುವಂತಿರುತ್ತವೆ. ಇನ್ನೂ ಕೆಲವು ಪಕ್ಷಗಳು ಸರ್ವಸಾಧಾರಣ ಜಾತ್ಯಾತೀತವಾಗಿದ್ದರೂ ಕೂಡ, ಆಳುವ ಪಕ್ಷದ ಮೂಲಭೂತವಾದ ಸಾಮಾಜಿಕ ಆರ್ಥಿಕ ಧೋರಣೆಗಳನ್ನು ಆಹ್ವಾನಿಸುವುದರಲ್ಲಿ ವಿಫಲಗೊಂಡಿವೆ. ದೇಶದ ಯೋಜಿತ ಅಭಿವೃದ್ಧಿಯಕುರಿತು ಆ ಪಕ್ಷಗಳ ನಿಲುವು ಆಳುವ ಪಕ್ಷದ ನಿಲುವೆಯನ್ನೇ ಹೋಲುತ್ತಿವೆ" ಎಂದು ಸ್ಪಷ್ಟವಾಗಿ ತಿಳಿಸಿದೆ. ಕಾಂಗ್ರೈ ಮತ್ತು ಜನತಾ ಪಕ್ಷಗಳೊಳಗೆ ಸಂಭವಿಸಿದ ಇತ್ತೀಚಿನ ಘಟನೆಗಳುಸಿ.ಪಿ ಐ.(ಎಂ) ಪಕ್ಷದ ರಾಜಕೀಯ ವಿಶ್ಲೇಷಣೆಯನ್ನು ಸಮರ್ಥಿಸುತ್ತಿವೆ.

ಅತ್ಯಂತ ಹಿರಿಯರಾದ ಕಾಂಗ್ರೆಸ್ಸಿನ ಕಾರ್ಯವಾಹಕ ಅಧ್ಯಕ್ಷರಾದ ಕಮಲಾಪತಿ ತ್ರಿಪಾಠಿಯವರುರಾಜೀವ ಗಾಂಧಿಗೆ ಬರೆದ ಪತ್ರ, ಅದಕ್ಕೆ ಪೂರ್ವಭಾವಿಯಾಗಿ ಕಾಂಗ್ರೆಸ್*ಪಕ್ಷದ ಪುನರ್ಘಟನೆ ಸಂಘಟನಾ ವ್ಯವಹಾರಗಳ ಕುರಿತು ಹಲವಾರು ಹಿರಿಯ ಕಾಂಗ್ರೆಸ್ಸಿಗರ ಸಮಾಲೋಚನೆಗಳು, ಶ್ರೀಪತಿ ಮಿಶ್ರಾ, ಎ. ಪಿ. ಶರ್ಮಾ, ಪ್ರಣಬ ಮುಖರ್ಜಿ. ಪ್ರಕಾಶ ಮೆಹರೊತ್ರಾ ಮೊದಲಾದವರನ್ನು ಕಾಂಗ್ರೆಸ್ಸಿನಿಂದ ಅಮಾನತು ಮಾಡಿರುವುದುದು ಕಾಂಗ್ರೆಸ್ಸಿನೊಳಗೆ ಬೆಳೆದು ಬರುತ್ತಿರುವ ಬಿಕ್ಕಟ್ಟಿನನಿದರ್ಶನಗಳು.ಮುಸ್ಲಿಂ ಮಹಿಳೆಯರ ರಕ್ಷಣಾ ಮಸೂದೆಯನ್ನು ವಿರೋಧಿಸಿ ಕೇಂದ್ರ ಮಂತ್ರಿಆರಿಫ ಮಹಮ್ಮದ್‌ಖಾನ್‌ಅವರ ರಾಜೀನಾಮೆ, ಲೋಕಸಭೆಯಲ್ಲಿ ಆ ಮಸೂದೆಯನ್ನು ಮಂಡಿಸಿದಾಗಕಾಂಗ್ರೈ ಪಕ್ಷದೊಳಗೇನೇ ಸದಸ್ಯರಪ್ರತಿರೋಧ, ಮತದಾನದಲ್ಲಿ ಸ್ವಾತಂತ್ರ್ಯಬೇಕೆಂಬ ಬೇಡಿಕೆ, ಆ ಮಸೂದೆ ಬಿದ್ದುಹೋಗಬಹುದೆಂಬ ಅಂಜಿಕೆಯಿಂದ ಎಲ್ಲ ಸದಸ್ಯರೂ ಮಸೂದೆಗೆ ಮತ ಹಾಕಲೇಬೇಕೆಂದು ಪಕ್ಷದ ಆದೇಶಗಳೆಲ್ಲ ಕಾಂಗ್ರೈ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳ ಪ್ರದರ್ಶನ ಕಮಲಾಪತಿ ತ್ರಿಪಾಟಿಯವರು ಬಹಳ ಖಾರವಾಗಿಯೇ ರಾಜೀವ ಗಾಂಧಿಯವರಿಗೆ ಪತ್ರ ಬರೆದಿದ್ದಾರೆ. ಅಸ್ಸಾಂ ಒಪ್ಪಂದದ ಕುರಿತು ಬರೆಯುತ್ತ ಆ ಒಪ್ಪಂದದ ಪ್ರಕಾರ ವಿದೇಶೀಯರು ಮಾತ್ರವಲ್ಲದೆ, ಮತದಾನದ ಹಕ್ಕು ಇಲ್ಲದಂತ ಜನರೂ ನಮ್ಮ ದೇಶದಲ್ಲಿದ್ದಾರೆಂದು ಒಪ್ಪಿಕೊಂಡಂತಾಗಿದೆಂದು ಹೇಳಿದ್ದಾರೆ. "ನಿಮ್ಮ ತಾಯಿಯ ಬಡವರ ಪರವಾಗಿ ಎಂಬ ಮಾತು ಹಳೆಕತೆಯಾಗಿ ಈಗ ನಿಮ್ಮ ಆರ್ಥಿಕ ಧೋರಣೆ ಸಮಾಜದಲ್ಲಿರುವ ಶ್ರೀಮಂತರ ಪರವಾಗಿದೆ ಎಂದು ರಾಜೀವ ಗಾಂಧಿಯವರ ಆರ್ಥಿಕ ನೀತಿಯನ್ನು ಖಂಡಿಸಿದ್ದಾರೆ "ಪಕ್ಷದಲ್ಲಿಯೂ ಆಡಳಿತೆಯಲ್ಲಿಯೂ ಮೇಲಿಂದ ಮೇಲೆ ಬದಲಾವಣೆ ಮಾಡುವುದೇ ನಿಮ್ಮ ಕಾರ್ಯಪದ್ಧತಿಯ ವೈಖರಿಯಾಗಿದೆಂದೂ, 1984 ನವಂಬರ 14 ರಿಂದ 19 ಜನವರಿ 1986 ವರೆಗೆ 9 ಪ್ರಧಾನ ಕಾರ್ಯದರ್ಶಿಗಳನ್ನು ಬದಲಾಯಿಸಿದ್ದೀರೆಂದೂ ಒಂದು ಮಹತ್ವದ ಖಾತೆಯಲ್ಲಿ 5 ಸಲ ಮಂತ್ರಿಯ ಬದಲಾವಣೆಯಾಗಿದೆ" ಎಂದು ಪತ್ರದಲ್ಲಿ ಆರೋಪಿಸಿ, ಹಲವಾರು ರಾಜ್ಯಗಳ ಮುಖ್ಯಮಂತ್ರಿಗಳನ್ನು ಮನಬಂದಂತೆ ಬದಲಾವಣೆ ಮಾಡಲಾಗುತ್ತಿರುವ ಕಡೆ ಗಮನ ಸೆಳೆದಿದ್ದಾರೆ. ತಮ್ಮ ಹಿಡಿತವನ್ನು ಭದ್ರಗೊಳಿಸುವ ದುರುದ್ದೇಶದಿಂದ ಕೆಲವು ಹಿತಾಸಕ್ತಿಗಳು ಬೋಗಸ್‌ಸದಸ್ಯರನ್ನು ನೊಂದಾಯಿಸಿದ್ದಾರೆಂದೂ ಕಾಂಗ್ರೈ ಪಕ್ಷವು ಜನರ ಮಧ್ಯೆ ತನ್ನ ಪ್ರಭಾವ ಕಳಕೊಳ್ಳುತ್ತಿದೆಂದು ಎಚ್ಚರಿಸಿದ್ದಾರೆ.

ಕಾಂಗ್ರೈ ಪಕ್ಷದೊಳಗೆ ಈ ರೀತಿ ಅಸಮಾಧಾನದ ಹೊಗೆಯಾಡಲು ಮುಖ್ಯ ಕಾರಣ ರಾಜೀವ ಗಾಂಧಿಯವರ ಮೇಲಿದ್ದ ಭ್ರಮನಿರಸನವಾಗುತ್ತಿರುವುದು, ಚುನಾವಣೆಯ ಗೆಲುವಿನ ನಂತರ ಅವರು ಅನುಸರಿಸುತ್ತಿರುವ ಸಂಘಟನಾ ಮತ್ತು ಅವರ ಸರಕಾರದ ಸಾಮಾಜಿಕ ಆರ್ಥಿಕ-ರಾಜಕೀಯನೀತಿ ಕಾಂಗ್ರೈ ಪಕ್ಷದೊಳಗೂ, ಸಾರ್ವಜನಿಕರಲ್ಲೂ ನಿರಾಶೆಯನ್ನುಂಟು ಮಾಡುತ್ತಿದೆ ತನ್ನ ಎರಡು ವರ್ಷದ ಬಜೆಟ್ಟನಲ್ಲಿ ಜನರ ಮೇಲೆ ಹೇರಿದ ಕರಭಾರ, 21 ನೆ ಶತಮಾನಕ್ಕೆ ಹಾರುವಭ್ರಮೆಯಿಂದ ವಿದೇಶೀ ಬಹುರಾಷ್ಟ್ರೀಯಸಂಸ್ಥೆಗಳಿಗೆ ದೇಶದೊಳಗೆ ಬರುವಂತೆ ಆಮಂತ್ರಿಸಿರುವುದು, ಕಂಪ್ಯೂಟರ್ ಯಂತ್ರೀಕರಣ ಮುಂದುವರಿಕೆ, ಪ್ರಗತಿಗೆ ಅವಶ್ಯವಿದೆಂದು ಪ್ರತಿಪಾದಿಸಿ ಎಲ್ಲ ರಂಗಗಳಲ್ಲೂ ಅವು ಆಕ್ರಮಿಸುವಂತೆ ಮಾಡಿರುವುದು ಅವುಗಳಿಂದಾಗಿ ಸಾರ್ವಜನಿಕ ಕ್ಷೇತ್ರ, ಮಧ್ಯಮ, ಗುಡಿಕೈಗಾರಿಕೆಗಳಲ್ಲಿ ನಾಶವಾಗುತ್ತ ಸಾಗಿರುವುದು, ನಿರುದ್ಯೋಗಿಗಳ ಸೈನ್ಯ ಅಪಾರವಾಗಿ ಬೆಳೆಯುತ್ತಿರುವುದು ಇವುಗಳಿಂದ ಜನರ ಭ್ರಮನಿರಸನವಾಗುತ್ತಿದೆ. ಭೂ ಸುಧಾರಣೆ ಜಾರಿ ಮಾಡದಿರುವುದುರೈತರಿಗೆಭೂಮಿ ಸಿಗದಿರುವುದು, ಕೃಷಿಕಾರ್ಮಿಕರಿಗೆ ಕನಿಷ್ಠವೇತನ ಲಭ್ಯವಾಗದಿರುವುದು, ರೈತರಿಗೆ ನ್ಯಾಯಬೆಲೆ ಸಿಗದಿರುವುದು, ಅವರು ಕೊಳ್ಳುವ ರಸಗೊಬ್ಬರ, ಮತ್ತಿತರ ವಸ್ತುಗಳ ಬೆಲೆ ದುಬಾರಿಯಾಗುತ್ತಿರುವುದು, ಗ್ರಾಮಾಂತರ ಪ್ರದೇಶಗಳಲ್ಲೂ ನಿರುದ್ಯೋಗಿಗಳು ಹೆಚ್ಚಾಗಿ, ಪೇಟೆ ಪಟ್ಟಣ ಸೇರುತ್ತಿರುವುದು ಗಂಭೀರ ಪ್ರಶ್ನೆಯಾಗುತ್ತಿದೆ.

ರಾಜೀವ ಗಾಂಧಿಯವರ ಜನವಿರೋಧಿ ಆರ್ಥಿಕ ನೀತಿಯಿಂದ ಕಂಗೆಟ್ಟ ನಿರುದ್ಯೋಗಿ ಯುವ ಜನತೆ,ಛಿದ್ರಕಾರಿಗಳ, ಭಯೋತ್ಪಾದಕರ,ಜಾತೀಯವಾದಿಗಳ, ಪ್ರತ್ಯೇಕತಾವಾದಿಗಳ ಬಲೆಗೆ ಬಿದ್ದಿರುವುದು ದೇಶದ ಹಲವಾರುಕಡೆ ಕ್ರಿಶ್ಚಯನ್‌ಮಿಶಿನರಿಗಳ,ಎಡಪಂಥೀಯವಾದಿಗಳೆಂದು ಮೆರೆಯುವ ವಿದೇಶೀ ಹಣದ ಸಹಾಯದಿಂದ " ಜನಸೇವಕರೆಂದು " ಪಟ್ಟಹಚ್ಚಿಕೊಂಡಿರುವ ಸ್ವಯಂಸೇವಕ ಸಂಘಟನೆಗಳೊಂದಿಗೆ ಸೇರಿಕೊಂಡಿರುವುದು ದೇಶದ ಭದ್ರತೆಗೆ, ಸ್ವಾತಂತ್ರ್ಯಕ್ಕೆ ಸಾರ್ವಭೌಮತ್ವಕ್ಕೆ ಗಂಡಾಂತರಕಾರಿಯಾಗಿದೆ.

ತನ್ನ ನೀತಿಯಿಂದಾಗಿ ಜನರಲ್ಲಿ ಅಸಮಾಧಾನ ಬೆಳೆಯುತ್ತಿರುವುದನ್ನೂ, ತನ್ನ ಬೆಂಬಲ ಕರಗುತ್ತಿರುವುದನ್ನು, ಕಂಡ ರಾಜೀವ ಗಾಂಧಿ ಮುಸ್ಲಿಂ ಹಾಗೂ ಹಿಂದು ಪಂಥವಾದಿ ಜಾತೀಯವಾದಿಗಳೊಡನೆ ಒಪ್ಪಂದ ಮಾಡಿಕೊಳ್ಳುತ್ತಿರುವುದು ಜನರಲ್ಲಿ ಅಸಮಾಧಾನ ಉಂಟು ಮಾಡುತ್ತಿದೆ. ಇವುಗಳಿಂದಾಗಿ ಕಾಂಗ್ರೈ ಪಕ್ಷದೊಳಗೆ ಬಿರುಕುಬಿಟ್ಟದೆ, ಅದು ಆಳವಾಗುವುದರಲ್ಲಿ ಸಂಶಯವಿಲ್ಲ.

ಜನತಾ ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲೆಂಬ ವಿಷಯ ಆ ಪಕ್ಷದ ಅಧ್ಯಕ್ಷರ ಚುನಾವಣೆಯ ಸಮಯದಲ್ಲಿ ಕಂಡು ಬಂದಿತ್ತು. ಈಗ ಕರ್ನಾಟಕ ಮಹಾರಾಷ್ಟ್ರ ಗಡಿ ಪ್ರಶ್ನೆಯಲ್ಲಿ ಮತ್ತಷ್ಟು ಗಂಭೀರವಾಗಿ ಎದ್ದು ನಿಂತಿದೆ. ಮುಸ್ಲಿಂ ಮಹಿಳೆಯರ ರಕ್ಷಣಾ ಮಸೂದೆಯ ಕುರಿತು ಆ ಪಕ್ಷದೊಳಗಿನ ಆಂತರಿಕ ಭಿನ್ನಾಭಿಪ್ರಾಯ ಬಯಲಾಗಿದೆ.

ಅಲ್ಲದೆ ದೇಶದ ಮುಂದಿರುವ ಕೆಲವು ಮೂಲಭೂತ ಪ್ರಶ್ನೆಗಳ ಕುರಿತುಜನತಾ ಪಕ್ಷದೊಳಗೆ ಒಮ್ಮತವಿಲ್ಲದಾಗಿದೆ

ಕರ್ನಾಟಕದ ಬಹುಭಾಗ ಬರಗಾಲವನ್ನೆದುರಿಸುತ್ತಿರುವಾಗ, ಮೇವು,ನೀರು ನಿರುದ್ಯೋಗ, ಕಾರ್ಖಾನೆಗಳ ಮುಚ್ಚುವಿಕೆ, ಕಾಂಗ್ರೈ ಅಪಪ್ರಚಾರಗಳಂಥ ಗಂಭೀರ ಸಮಸ್ಯೆಗಳಿದ್ದರೂ ಕೂಡ ನಮ್ಮ ರಾಜ್ಯದ ಜನತಾ ಪಕ್ಷ ಜಾತಿ ಮತ್ತು ಗುಂಪುಗಾರಿಕೆಗಳಿಂದ, ಅಧಿಕಾರಕ್ಕೇರಲು ಹವಣಿಸುತ್ತಿರುವವರಿಂದ, ತುಂಬಿದೆ. ಆ ಕಾರಣದಿಂದಾಗಿ ಅಧಃಪತನ, ಭ್ರಷ್ಟಾಚಾರಗಳಿಂದಾಗಿ ಆಡಳಿತೆ ಕುಸಿಯುತ್ತಿದೆ. ಒರಟುತನ, ಅಸಮರ್ಪಕ ಆಡಳಿತೆಗಾಗಿ ಕೆಲವು ಮಂತ್ರಿಗಳನ್ನು ಕೈಬಿಡಬೇಕೆಂಬ 93 ಶಾಸಕರ ಮನವಿಪತ್ರ ಪಕ್ಷದೊಳಗಿನ ಅಸಮಾಧಾನವನ್ನು ತೋರ್ಪಡಿಸುತ್ತದೆ. ಬಂಡವಳಶಾಹಿ ಪಕ್ಷದಲ್ಲಿರತಕ್ಕ ಕೆಟ್ಟ ಗುಣಗಳನ್ನು ಕರ್ನಾಟಕದ ಜನತಾ ಪಕ್ಷದಲ್ಲೂ ಕಾಣಬಹುದಾಗಿದೆ.

ದೇಶದ ಇತರ ವಿರೋಧ ಪಕ್ಷಗಳ ಅಂತರಿಕ ಸಮಸ್ಯೆ ಹೇಳಿಕೊಳ್ಳುವಂತಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಸಿ.ಪಿ.ಐ (ಎಂ) ಮತ್ತು ಇತರ ಎಡಪಕ್ಷಗಳು, ಕಾಂಗ್ರೈ ಹಾಗೂ ಇತರ ಬಂಡವಳಶಾಹಿ ಪಕ್ಷಗಳ ನೀತಿ ನಿಲುವುಗಳ ಕುರಿತು ಅಸಮಾಧಾನ ಗೊಂಡ ಜನರನ್ನು ತಮ್ಮೆಡೆಗೆ ಎಳೆದುಕೊಳ್ಳಲು ಪ್ರಯತ್ನಿಸಬೇಕು. ಜನತೆಯ ಅಸಮಾಧಾನವನ್ನು ಜನಜಾಗೃತಿಗೊಳಿಸುವುದಕ್ಕಾಗಿ ಬದಲಿ ಕಾರ್ಯಕ್ರಮದತ್ತ ಆಕರ್ಷಿಸುವ ಸಲುವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಬೆಂಬಲಕೊಡುವಂತೆ ಕ್ರಮ ಕೈಗೊಳ್ಳಬೇಕು.

ರಾಜೀವ ಗಾಂಧಿ ಆಡಳಿತೆಯ ಕುರಿತು ಜನತೆಯಲ್ಲುಂಟಾಗುತ್ತಿರುವ ಅಸಮಾಧಾನ,ಅವರ ನಡಾವಳಿ ಮತು ಅವರ ಧೋರಣೆ ವಿಷಯವಲ್ಲಿ ಕಾಂಗೆ ಒಳಗೆ ಎದ್ದಿರುವ ಭಿನ್ನಾಭಿಪ್ರಾಯಗಳಿಗೆ ಹೆಚ್ಚು ಚಾಲನೆ ಕೊಡಬಹುದು. ಕಾಂಗ್ರೈಯ ಜನವಿರೋಧಿ ನೀತಿ, ಆ ಪಕ್ಷದ ಕುಸಿತಕ್ಕೆ ಆ ಪಕ್ಷದ ಆಂತರಿಕ ಭದ್ರತೆಗಾಗಿ ಸಹಾಯವಾಗಬಹುದು. ಇಂಥ ಪರಿಸ್ಥಿತಿಯಲ್ಲಿ ಆ ಪಕ್ಷದ ಮುಖಂಡರೊಳಗೆ ಒಪ್ಪಂದ, ಚರ್ಚೆಗಳು ಅನಿವಾರ್ಯ. ಆದರ ಪಕ್ಷದೊಳಗೆ ಹೆಚ್ಚಾಗುತ್ತಿರುವ ಅಸಮಾಧಾನಕ್ಕೆ ಅದು ಕಾಲಾವಕಾಶ ಮಾತ್ರ ಒದಗಿಸಬಹುದಷ್ಟೆ.

ಜನರ ಮಧ್ಯೆ ಬೆಳೆಯುತ್ತಿರುವ ಅಸಮಾಧಾನವನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಉಪಯೋಗಿಸಿಕೊಳ್ಳಬೇಕು. ಅ ಜನರನ್ನು ತಮ್ಮೆಡೆ ಆಕರ್ಷಿಸಬೇಕು. ಕಾಂಗ್ರೈಯ ಆರ್ಥಿಕ ಧೋರಣೆಗಳಿಂದಾಗುವ ಅಸಮಾಧಾನ ಎಡಮತ್ತುಪ್ರಜಾಪ್ರಭುತ್ವಶಕ್ತಿಗಳಬೆಳವಣಿಗೆಗೆ ಸಹಾಯವಾಗಬೇಕು ಕಾಂಗ್ರೈ ವಿರೋಧಿ ಭಾವನೆಯನ್ನು ಎಡ ಶಕ್ತಿಗಳು ಉಪಯೋಗಿಸಿ, ಅ ಜನರಿಗೆ ತಿಳಿಹೇಳುವಲ್ಲಿ ಮುಂದಾಳತ್ವವಹಿಸಬೇಕು ಹಾಗೆ ಮಾಡಿದರೆ ಮಾತ್ರ ಕಾಂಗ್ರೈ ಧೋರಣೆಗಳ ವಿರುದ್ಧ ಹೋರಾಡಲು, ಎಡ ಶಕ್ತಿಗಳ ಐಕ್ಯತೆ ಸಾಧಿಸಲು ಕಾಂಗ್ರೈ ಶಕ್ತಿ ಮತ್ತಷ್ಟು ಕುಂದಿಸಲು ಸಾಧ್ಯ.

ಆದ ಕಾರಣ ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷ ಹಾಗೆಯೇ ಇತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಈ ಪರಿಸ್ಥಿತಿಯ ಸದವಕಾಶ ಪಡೆದು, ಜನರ ಮಧ್ಯೆಹೋಗಿ,ಅವರಿಗೆ ತಿಳುವಳಿಕೆ ಕೊಟ್ಟು ಕಾಂಗ್ರೈಗೆ ವಿರೋಧವಾಗಿ ಬೃಹತ್ ಚಳುವಳಿ ಮೂಡಿಸಬೇಕು.

ವಿದೇಶಿ ಹಣ, ಕ್ರಿಯಾತ್ಮಕ ಗುಂಪುಗಳು ಹಾಗೂ ಕೇಂದ್ರ ಸರಕಾರ

—ಪ್ರಕಾಶ್ ಕಾರತ್

ಕಳೆದ ಕೆಲವು ವರ್ಷಗಳಿಂದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು 1981 ರಲ್ಲಿಯೇ ಈ ದೇಶದಲ್ಲಿ ಕೆಲವು ಸ್ವಯಂಸೇವಾಸಂಸ್ಥೆಗಳು ವಿದೇಶದಿಂದ ಹಣಕಾಸಿನ ನೆರವನ್ನು ಅಪಾರ ಪ್ರಮಾಣದಲ್ಲಿ ಪಡೆದು ಅವು ನಮ್ಮ ದೇಶದ ರಾಜಕೀಯ ಆಗುಹೋಗುಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವ, ವಿಚ್ಛಿದ್ರಕಾರಿ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಸರಕಾರದ ಹಾಗೂ ದೇಶದ ಲಕ್ಷ್ಯವನ್ನು ಸೆಳೆದಿದೆ. ಇಂತಹ ಸ್ವಯಂಸೇವಾ ಸಂಸ್ಥೆಗಳ ಚಟುವಟಿಕೆ ಈ ಅವಧಿಯಲ್ಲಿ ಇನ್ನಷ್ಟು ತೀವ್ರಗೊಂಡಿರುವುದು ಮಾತ್ರವಲ್ಲ, ಅವುಗಳಿಗಾಗಿ ವಿದೇಶದಿಂದ ಬರುತ್ತಿರುವ ಹಣಕಾಸಿನ ನೆರವಿನ ಪ್ರಮಾಣವೂ ಏರುತ್ತಿದೆ. ಈ ಸಂಸ್ಥೆಗಳ ಚಟುವಟಿಕೆಗಳ ಮೇಲೆ ಕೇಂದ್ರ ಸರಕಾರ ಹೇರಿರುವ ನಿಯಂತ್ರಣ ಎಳ್ಳಷ್ಟೂ ಸಾಲದು. ತೀರಾ ಇತ್ತೀಚೆಗಿನ ಇನ್ನೊಂದು ಕಳವಳಕಾರಿ ವಿದ್ಯಮಾನವೆಂದರೆ ಸ್ವತಃ ಕೇಂದ್ರ ಸರಕಾರವೇ ಇಂತಹ ವಿದೇಶಿ ಹಣ ಪಡೆದ ಸ್ವಯಂಸೇವಾ ಸಂಸ್ಥೆಗಳನ್ನು ರಾಷ್ಟ್ರದ ಅಭಿವೃದ್ಧಿಯೋಜನೆಗಳಲ್ಲಿ ನೇರವಾಗಿ ಭಾಗಿಗಳಾಗುವಂತೆ ಆಮಂತ್ರಿಸುತ್ತಿದೆ ಮತ್ತು ಈ ಮೂಲಕ ಸಂದೇಹಾಸ್ಪದ ಚಟುವಟಿಕೆಗಳಲ್ಲಿ ನಿರತರಾಗಿರುವ ಇಂತಹ ಸಂಸ್ಥೆಗಳಿಗೆ ತಾನೇ ಮಾನ್ಯತೆ ನೀಡುತ್ತಿದೆ. ಆದರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಡೆಸಿರುವ ಪ್ರಚಾರದಿಂದಾಗಿ ವಿದೇಶದಿಂದ ನೆರವುಪಡೆಯುತ್ತಿರುವ ಅನೇಕ ಸ್ವಯಂಸೇವಕ ಸಂಘಗಳ ಸಂಶಯಾಸ್ಪದ ಚಟುವಟಿಕೆಗಳ ಕುರಿತು ದೇಶದ ಜನತೆಯ ನಡುವೆ ಸಾಕಷ್ಟು ಎಚ್ಚರ ಮೂಡಿದೆಯಲ್ಲದೆ ಅಂತಹ ಚಟುವಟಿಕೆಗಳಲ್ಲಿ ನಿರತರಾಗಿರುವವರ ವಿರುದ್ಧ ಜನಾಭಿಪ್ರಾಯವೂ ಬೆಳೆದು ಬರುತ್ತಿದೆ.

*ಸಾಮ್ರಾಜ್ಯ ಶಾಹಿ ಹಣದ ಪ್ರವಾಹ

ಕಳೆದ ಹತ್ತು ವರ್ಷಗಳಲ್ಲಿ ಸಾಮ್ರಾಜ್ಯಶಾಹಿ ಮೂಲಗಳಿಂದ ವಿವಿಧ ಕ್ರಿಯಾ ಸಂಸ್ಥೆಗಳಿಗೆ ಹರಿದು ಬಂದ ಹಣದ ಹೊಳೆಯ ಪ್ರಮಾಣ ಅಗಾಧವಾದದ್ದು. 19 6-77 ರಲ್ಲಿ ಸುಮಾರು ಐದುಸಾವಿರದಷ್ಟಿದ್ದ ಇಂತಹ ಕ್ರಿಯಾ ಗುಂಪುಗಳಿಗೆ ರೂ. 182.3 ಕೋಟಿ ರೂಪಾಯಿಗಳು ವಿದೇಶದಿಂದ ಬಂದಿದ್ದರೆ; 1979-80 ರಲ್ಲಿ 170 ಕೋಟಿ, 1981 ರಲ್ಲಿ 209 1ಕೋಟಿ 1982 ರಲ್ಲಿ 230 4 ಕೋಟಿ ಮತ್ತು 1983 ರಲ್ಲಿ ಈ ರೀತಿ ಬಂದ ಹಣ ರೂ. 233 ಕೋಟಿಯನ್ನು ಮೀರಿದೆ. ದೇಶಾದ್ಯಂತ ಸುಮಾರು ಏಳು ಸಾವಿರಕ್ಕೂ ಮಿಕ್ಕಿ ಸ್ವಯಂ ಸೇವಕ ಸಂಸ್ಥೆಗಳೂ ಕ್ರಿಯಾಗುಂಪುಗಳೂ ಈ ಹಣವನ್ನು ಪಡೆದಿವೆ. ಈ ರೀತಿ ಹಣಕಳಿಹಿಸುವ ರಾಷ್ಟ್ರಗಳಲ್ಲಿ ಪ. ಜರ್ಮನಿ ಮೊದಲನೆಯ ಸ್ಥಾನದಲ್ಲಿದ್ದರೆ ಅಮೇರಿಕಾ ಸಂಯುಕ್ತ ಸಂಸ್ಥಾನ ಎರಡನೆಯದು.

*ಸರಕಾರಕ್ಕೆ ಏನೂ ನಿಯಂತ್ರಣವಿಲ್ಲ

ಈ ರೀತಿ ಹರಿದು ಬರುತ್ತಿರುವ ಹಣದ ಹೊಳೆಯನ್ನು ಯಾರು, ಹೇಗೆ ಉಪಯೋಗಿಸುತ್ತಿದ್ದಾರೆ ಅನ್ನುವ ವಿಚಾರದಲ್ಲಿ ಸರಕಾರಕ್ಕೆ ಏನೂ ನಿಯಂತ್ರಣ ಇಲ್ಲ. ಪ್ರತಿವರ್ಷ ಸರಾಸರಿ 200 ಕೋಟಿ ರೂಪಾಯಿಗೂ ಮಿಗಿಲಾಗಿ ಬರುತ್ತಿರುವ ಈ ಅಪಾರ ಮೊತ್ತದ ಹಣ ಕೆಲವು ವೇಳೆ ಒಬ್ಬಿಬ್ಬರು ವ್ಯಕ್ತಿಗಳೇ ನಡೆಸುತ್ತಿರುವಂತಹ ಸಂಘಟನೆಗಳ ಹೆಸರಲ್ಲಿ ಬರುತ್ತಿದೆ. ಹತ್ತಿಪ್ಪತ್ತು ಮಂದಿ ವ್ಯಕ್ತಿಗಳು ಈ ರೀತಿ ಪಡೆಯುತ್ತಿರುವ ಹಣ ಯಾವ ಉದ್ದೇಶಗಳಿಗಾಗಿ ಅದನ್ನು ನೀಡಲಾಗುತ್ತಿದೆಯೋ ಅದಕ್ಕಿಂತ ಬೇರೆಯೇ ಆದ ಉದ್ದೇಶಗಳಿಗೆ ಬಳಸಲ್ಪಡುತ್ತಿರುವುದು ಖಚಿತವಾಗಿ ಗೋಚರಿಸುತ್ತಿದೆ. ರಾಜಕೀಯವಾಗಿ ತುಂಬಾ ಸೂಕ್ಷ್ಮವಾಗಿರುವ ಗಡಿ ರಾಜ್ಯಗಳಲ್ಲಿ ಮತ್ತು ಈಶಾನ್ಯ ಪ್ರದೇಶದಲ್ಲಿ ಈ ಹಣ ಮಾಡುತ್ತಿರುವ ಹಾನಿ ಅಪಾರ. ವಿದೇಶದಿಂದ ಬರುತ್ತಿರುವ ಈ ಹಣ ದುರುದ್ದೇಶಗಳಿಗಾಗಿ ಬಳಸಲ್ಪಡುತ್ತಿರುವುದಕ್ಕೆ ಈ ಕೆಳಗಿನ ಕೆಲವು ನಿದರ್ಶನಗಳೇ ಸಾಕು.

*ತ್ರಿಪುರಾ ಉಪಜಾತಿ ಜುಬಾ ಸಮಿತಿಗೆ ಕುಮ್ಮಕ್ಕು

ತ್ರಿಪುರಾದಲ್ಲಿ ಆದಿವಾಸಿಗಳ ನಡುವೆ ಪ್ರತ್ಯೇಕತಾವಾದಿ ಚಳುವಳಿ ನಡೆಸುತ್ತಿರುವ ತ್ರಿಪುರಾ ಉಪಜಾತಿ ಜುಬಾ ಸಮಿತಿ ಎಂಬ ರಾಜಕೀಯ ಪಕ್ಷಕ್ಕೆ ತ್ರಿಪುರಾ ಬ್ಯಾಪ್ಟಿಸ್ಟ್ ಕ್ರಿಶ್ಚಿಯನ್ ಯೂನಿಯನ್ (TBCU) ನಿಂದ ಧನ ಸಹಾಯ ದೊರೆಯುತ್ತಿದೆ. ವರ್ಲ್ಡ್ ಬ್ಯಾಪ್ಟಿಸ್ಟ್ ಅಲಯನ್ಸ್‌ನ (USA) ನ್ಯೂಜಿಲೆಂಡ್ ಶಾಖೆಯಿಂದ ಈಸಂಸ್ಥೆಗೆ ಪ್ರತಿ ವರ್ಷ ಹತ್ತು ಲಕ್ಷ ರೂಪಾಯಿ ದೇಣಿಗೆ ಬರುತ್ತಿದೆ. ತ್ರಿಪುರಾ ಬ್ಯಾಪ್ಟಿಸ್ಟ್ ಕ್ರಿಶ್ಚಿಯನ್ ಯೂನಿಯನ್‌ನಿಂದ ಬೆಳೆಸಲ್ಪಟ್ಟ ಬಿಜೋಯ್ ಹರಂಗ್‌ಕಲ್ ಎಂಬಾತ ತ್ರಿಪುರಾ ನ್ಯಾಶನಲ್ ವಾಲಂಟೀರ್ಸ್ (TNU) ಎಂಬ ಸಶಸ್ತ್ರ ಬಂಡಾಯಗಾರ ಸಂಸ್ಥೆಯಲ್ಲಿ ಮುಂದಾಳಾಗಿದ್ದಾನೆ. ತ್ರಿಪುರಾದಲ್ಲಿ ಕಾಂಗ್ರೆಸ್ (ಐ)ನ ಮಿತ್ರಪಕ್ಷವಾಗಿರುವ ಟಿ. ಯು. ಜೆ. ಎಸ್.ಗೆ ಈಗಲೂ ವಿದೇಶಿ ಕ್ರಿಶ್ಚಿಯನ್ ಸಂಸ್ಥೆಗಳಿಂದ ಹಣ ಬರುತ್ತಿದೆ. ಕಾಂಗ್ರೆಸ್ (ಐ) ಪಕ್ಷಕ್ಕೆ ಸಿ.ಪಿ.ಐ.(ಎಂ)ನ ಮೇಲೆ ರಾಜಕೀಯ ದ್ವೇಷಸಾಧನೆ ಮುಖ್ಯವೇ ಹೊರತು ದೇಶದ ಸಮಗ್ರತೆ ಅಲ್ಲ. ಸಿ.ಪಿ ಐ (ಎಂ)ನ್ನು ಸೋಲಿಸಬೇಕಾದರೆ ವಿದೇಶದಿಂದ ಹಣ ಪಡೆಯುವ ಪ್ರತ್ಯೇಕವಾದಿ ದೇಶದ್ರೋಹಿ ಗುಂಪುಗಳ ಜೊತೆಗೆ ಚಕ್ಕಂದವಾಡುವುದು ಕಾಂಗ್ರೆಸ್(ಐ)ಗೆ ಅಗತ್ಯವಾಗಿಬಿಟ್ಟಿದೆ.

ಕಲ್ಕತ್ತಾದಲ್ಲಿರುವ ಠಾಗೋರ್ ಸೊಸಾಯಿಟಿ ಫಾರ್ ರೂರಲ್ ಡೆವಲಪ್‌ಮೆಂಟ್ ಎಂಬ ಸಂಸ್ಥೆ ಈ ರೀತಿ ಪ. ಜರ್ಮನಿಯಿಂದ ಹಣ ಪಡೆಯುತ್ತಿರುವ ಸಂಸ್ಥೆಗಳಲ್ಲಿ ಒಂದು. ಸತ್ಯನಾರಾಯಣಸಿಂಗ್ ನೇತೃತ್ವದ ಸಿ. ಪಿ. ಐ. (ಎಂ. ಎಲ್)ನ ಸಂತೋಷ್ ರಾಣಾ ಮತ್ತು ಭಾಸ್ಕರ್ ನಂದಿ ಅವರ ಮುಂದಾಳುತ್ವದಲ್ಲಿರುವ ಒಂದುಗುಂಪಿಗೆ ಠಾಗೋರ್ ಸೊಸಾಯಿಟಿಯಿಂದ ಅಪಾರ ಮೊತ್ತದ ಹಣ ದೊರೆತಿದೆ. ಇದು 1983 ರಲ್ಲಿ ಈ ಪಕ್ಷದಲ್ಲಿ ತೀವ್ರ ಚರ್ಚೆಗೂ ಎಡೆ ಮಾಡಿಕೊಟ್ಟಿತ್ತು. ಪ. ಬಂಗಾಳದ ಅನೇಕ ಖಾಸಗಿ ಸಂಸ್ಥೆಗಳಿಗೆ ಠಾಗೋರ್ ಸೊಸಾಯಿಟಿಯಿಂದ ಹಣ ನೀಡಲಾಗಿದೆ. ಆಂಧ್ರ ಪ್ರದೇಶದಲ್ಲಿ, ಬಿಹಾರದಲ್ಲಿ ಇಂತಹ ಅನೇಕ ಉದಾಹರಣೆಗಳಿವೆ.

(6ನೇ ಪುಟ ನೋಡಿ)

ಯಲಬುರ್ಗಾ

ರೈತರ ಮೇಲೆ ಪೋಲೀಸರ ಹಿಂಸಾಚಾರ

26-5-86 ರಂದು ಬರಗಾಲ ಪರಿಹಾರ ಕಾಮಗಾರಿಗಳನ್ನು ಮುಂದುವರೆಸುವಂತೆ, ಕಾಮಗಾರಿಗಳಲ್ಲಿ ಭ್ರಷ್ಟಾಚಾರ ನಿಲ್ಲಿಸುವಂತೆ, ಬಿತ್ತನೆ ಬೀಜ,ಗೊಬ್ಬರಗಳನ್ನು ಒದಗಿಸುವಂತೆ, ಒತ್ತಾಯಿಸಿ ಯಲಬರ್ಗಾ ಬಂದ್ ಹಾಗೂರಸ್ತಾರೋಕೋ ನಡೆಸುತ್ತಿದ್ದ ರೈತರ ಮೇಲೆ ಪೋಲೀಸರು ದೌರ್ಜನ್ಯ ನಡೆಸಿ ಲಾಠೀ ಚಾರ್ಜ್, ಅಶ್ರುವಾಯು ಪ್ರಯೋಗ ಮಾಡಿದ್ದಾರೆ, ಯಲಬುರ್ಗಾದ ಓಣಿ ಓಣಿಗಳಲ್ಲಿ ಅಟ್ಟಾಡಿ ಹೊಡೆದಿರುವುದಲ್ಲದೆ, ರೈತರು ಬಂದ ಹಳ್ಳಿಗಳಿಗೆ ಹೋಗಿ ಕೈಗೆ ಸಿಕ್ಕವರನ್ನು ಥಳಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ಯಲಬುರ್ಗಾ ಘಟಕ 19-5-86 ರಂದು ತಹಸೀಲ್ದಾರರಿಗೆ ಮನವಿ ನೀಡಿ 26-5-86 ರ ಒಳಗೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಇಲ್ಲದಿದ್ದರೆ 26-5-86 ರಂದು ರಸ್ತಾರೋಕೋ ಮತ್ತು ಯಲಬುರ್ಗಾ ಬಂದ್ ನಡೆಸುವುದಾಗಿ ತಿಳಿಸಿತ್ತು.

ಅದೇ ರೀತಿ 26-5-86 ರಂದು ಬೆಳಿಗ್ಗೆ 8.30 ಕ್ಕೆ 300 ರೈತರು ರಸ್ತಾರೋಕೋವನ್ನು ಆರಂಭ ಮಾಡಿದರು. ಹಿಂದಿನ ದಿನವೇ ಪೋಲೀಸರು ಎರಡು ಮೂರು ಗಂಟೆಗಳ ಕಾಲ ರಸ್ತೆ ರೋಕೋ ನಡೆಸುವುಕ್ಕೆ ಸೂಚಿಸಿ ಅದನ್ನು ರೈತ ಸಂಘ ಒಪ್ಪಿ ಅದೇ ಪ್ರಕಾರ ರಸ್ತಾರೋಕೋ ಆರಂಭವಾಯಿತು.

ಆದರೆ ಬರಗಾಲ ಕಾಮಗಾರಿಗಳ ಭ್ರಷ್ಟಾಚಾರವನ್ನು ಬಯಲಿಗೆಳೆಯುತ್ತಿದ್ದ, ಅದೇ ತಾಲ್ಲೂಕಿನಲ್ಲಿ ನಡೆದ ಕುದುರೆಮೋತಿ ಪ್ರಕರಣದ ಆರೋಪಿಗಳನ್ನು ಪ್ರತಿಭಟಿಸುವುದರಲ್ಲಿ ಮುಂದಾಳಾಗಿದ್ದ, ರೈತಸಂಘದಮೇಲೆಸೇಡುತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದ ತಾಲ್ಲೂಕಿನ ಕುದುರೆ ಮೋತಿ ಪ್ರಕರಣದಲ್ಲಿ ಕುಪ್ರಸಿದ್ಧ ಶಾಸಕ ರಾಯರೆಡ್ಡಿ ಹಾಗೂ ಅವರ ಜೊತೆ ಶಾಮೀಲಾದ ಅಧಿಕಾರಿ ವರ್ಗದವರು, ರೈತ ಮುಖಂಡರನ್ನು ಎಳೆದೊಯ್ದರು. ನಂತರ ಸರದಿಯ ಮೇಲೆ ರಸ್ತಾರೋಕೋ ಮುಂದುವರಿಸಿದರು. ರೈತ ಸಂಘದ ಮುಖಂಡರ ಬಂಧನದ ಸುದ್ದಿ ಕೇಳಿ ಸುತ್ತ ಮುತ್ತಲ ಗ್ರಾಮಗಳಿಂದ ಸಾವಿರಾರು ರೈತರು ಬಂಧಿತ ರೈತ ಮುಖಂಡರ ಬಿಡುಗಡೆಗೆ ಒತ್ತಾಯಿಸಿದಾಗ ಪೋಲೀಸರು ಲಾಠಿ ಚಾರ್ಜ್ ಮಾಡಿ ಅಶ್ರುವಾಯು ಸಿಡಿಸಿ ಹಿಂಸಾ ಕಾಂಡವನ್ನು ಆರಂಭಿಸಿದರು.

ಪೋಲೀಸರ ಅಮಾನುಷ ಹಿಂಸಾಚಾರವನ್ನು ನೋಡಿದ ಮಹಿಳೆಯರೂ ಪೋಲೀಸ್ ಠಾಣೆಗೆ ಘೇರಾಯಿಸಿದ್ದನ್ನು, ಪ್ರತಿಭಟನೆ ಮುಂದುವರೆಸಿದ್ದನ್ನು ನೋಡಿದ ಪೋಲೀಸರು ಹೆದರಿ ಒಂದು ವಾರದವರೆಗೆ ಯಲಬರ್ಗಾದಲ್ಲಿ 144 ನೇ ಸೆಕ್ಷನ್ ಜಾರಿ ಮಾಡಿದ್ದಾರೆ.

ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಜಿಲ್ಲಾ ಅಧಿಕಾರಿಗೆ ಪ್ರತಿಭಟನೆಯನ್ನು ಸಲ್ಲಿಸಿದೆ ಹಾಗೂ ಜೂನ್ ಮೊದಲ ವಾರದಲ್ಲಿ ಜಿಲ್ಲಾದ್ಯಂತ ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟಿಸಲು ತೀರ್ಮಾನಿಸಿದೆ.

ಬಂಗಾರಪ್ಪನವರ ಮೇಲೆ ಕೋರ್ಟಿನ ಆಪಾದನೆ

— ಪಿ. ರಾಮಚಂದ್ರರಾವ್

ಶ್ರೀ ಮಾನ್ ಬಂಗಾರಪ್ಪನವರು ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ (ಐ) ಯ ಮುಂದಾಳು. ಇವರಿಗೆ ವಿಧಾನ ಸಭೆಯ ಒಳಗೂ ವಿಧಾನ ಸಭೆಯ ಹೊರಗೂ "ಬೇರೆಯವರ ಮೇಲೆ ಗಂಭೀರವಾದ ಆಪಾದನೆಗಳನ್ನು ಮಾಡುವುದು" ಚಟ. ಆದರಿಂದಾಗಿ ಇವರ ಮೇಲೆ ಹಲವಾರು ಮೊಕದ್ದಮೆಗಳು ರಾಜ್ಯದ ಹಲವು ಕೋರ್ಟುಗಳಲ್ಲಿ ದಾಖಲಾಗಿವೆ. ಈಗ ಕುತೂಹಲದ ಸಂಗತಿ ಎಂದರೆ "ಇವರ ಮೇಲೇನೆ ಕಾನೂನು ಬಾಹಿರವಾಗಿ 47 ಎಕ್ರೆ ಮತ್ತು 1 ಗುಂಟಾ ಒಕ್ಕಲುಗಳ ಭೂಮಿಯನ್ನು ಕ್ರಯಕ್ಕೆ ಪಡೆದುಕೊಂಡ ಆಪಾದನೆಯು ಕರ್ನಾಟಕ ಹೈಕೋರ್ಟಿನಲ್ಲಿ ಮಾಡಲಾಗಿದೆ.

ಸದ್ರಿ ಕೇಸಿನ ವಿವರ ಹೀಗಿದೆ : ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಲಕ್ಕವಳ್ಳಿ ಗ್ರಾಮದ ಸರ್ವೇ ನಂಬರು 114 ಮತ್ತು 115 ರಲ್ಲಿ ಒಟ್ಟು 47 ಎಕ್ರೆ ಮತ್ತು 1 ಗುಂಟಾಕ್ಕೆ ಸಂಬಂಧಪಟ್ಟು ಶ್ರೀ ಸೋಮಪ್ಪ ಮತ್ತಿತರರು 2 ರಿಟ್ ಪಿಟಿಶನುಗಳನ್ನು ಕರ್ನಾಟಕ ಹೈ ಕೋರ್ಟಿನಲ್ಲಿ ಸಮರ್ಪಿಸಿ, "ಈ ಭೂಮಿ ಮಾರ್ಚ್ 1, 1975 ರಲ್ಲಿ ಒಕ್ಕಲುಗಳ ಕೈಯಲ್ಲಿದ್ದ ಭೂಮಿಯಾದುದರಿಂದ, ಅದು ಸರಕಾರದ ವಶದಲ್ಲಿದೆ. ಎಂದು ಪರಿಗಣಿಸಿಟ್ಟಿರಬೇಕು. ಆದುದರಿಂದ ಈ ಭೂಮಿ ಸರಕಾರದದ್ದೆಂದು ಪರಿಗಣಿಸಿ ಅದು ಕೃಷಿಕೂಲಿಕಾರರಿಗೂ, ಭೂಹೀನರಿಗೂ ಹಂಚಿಕೊಡಬೇಕೆಂದು ವಿನಂತಿ ಮಾಡಿರುವರು.

ಈ ಭೂಮಿಯ ಒಡೆಯರು ಹಿಂದೆ ಶ್ರೀ ಹಿಂದು ಮಾಧವಾಚಾರ್ ಮತ್ತು ಎಂ. ರಾಘವೇಂದ್ರಚಾರ್ ಆಗಿದ್ದು,

(8ನೇ ಪುಟ ನೋಡಿ)

“ವರ್ಣ ದ್ವೇಷಿಗಳು ದಕ್ಷಿಣ ಆಫ್ರಿಕಾವನ್ನು

["ದಕ್ಷಿಣ ಆಫ್ರಿಕಾವನ್ನು ವರ್ಣ ದ್ವೇಷಿಗಳು ಆಳಲಾಗದಂತೆ ಮಾಡಿ" ಎಂದು ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ ದ. ಆಫ್ರಿಕಾದ ಜನ ಸಮುದಾಯಕ್ಕೆ ಕರೆ ನೀಡಿದೆ. ಈಗ ದ. ಆಫ್ರಿಕಾದ ತುಂಬೆಲ್ಲಾ ಈ ರಣ ಕಹಳೆ ಮೊಳಗುತ್ತಿದೆ. ಲಕ್ಷಾಂತರ ಜನ ಜೀವದ ಹಂಗು ತೊರೆದು ಬೀದಿ ಬೀದಿಗಳಲ್ಲಿ ಹೋರಾಟ ನಡೆಸಿದ್ದಾರೆ. ಪೋಲೀಸರ ಪಿಶಾಚ ಕೃತ್ಯಗಳಿಂದ ಸತ್ತ ಪ್ರತಿಯೊಬ್ಬರ ಸಾವಿನ ಮೆರವಣಿಗೆಯೂ ವಿಮೋಚನ ಹೋರಾಟದ ಮೆರವಣಿಗೆಗಳಾಗುತ್ತಿವೆ. ನೆಲ್ಸನ್ ಮಾಂಡೆಲಾರವರನ್ನು ಬಂಧಿಸಿ ಒಳಗಿಟ್ಟರೇನಾಯಿತು, ಅವರ ಪತ್ನಿ ವಿನ್ನಿ ಮಾಂಡೆಲಾ ಸರಕಾರದ ಎಲ್ಲ ಗಡಿಪಾರು ಆಜ್ಞೆಗಳನ್ನು ಧಿಕ್ಕರಿಸಿ ಮಿಂಚಿನಂತೆ ಸಂಚರಿಸುತ್ತಾ ಜನರಲ್ಲಿ ಸ್ಫೂರ್ತಿಯ ಕಿಡಿ ಹಚ್ಚಿದ್ದಾರೆ.

ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ಗೆ ಹೆಚ್ಚುತ್ತಿರುವ ಜನ ಬೆಂಬಲ ಇಲ್ಲಿಯವರೆವಿಗೂ ವರ್ಣ ದ್ವೇಷಿ ಸರಕಾರದ ಊರುಗೋಲಾಗಿದ್ದ ಬಿಳಿ ಬಂಡವಾಳಶಾಹಿಗಳು ಕೂಡ ಮಾತುಕತೆಗಾಗಿ ಲುಸಾಕ (ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ ಕೇಂದ್ರ ಕಛೇರಿ) ಕ್ಕೆ ಧಾವಿಸುವಂತೆ ಮಾಡಿದೆ. ದ. ಆಫ್ರಿಕಾ ಮಿಲಿಟರಿ ಬಲದ ಆಧಾರವಾದ ಬಿಳಿ ವಿದ್ಯಾರ್ಥಿಗಳು ಸೈನ್ಯ ಸೇರುವುದಕ್ಕೆ ನಿರಾಕರಿಸುತ್ತಿದ್ದಾರೆ. ಅವರ ಸಂಘಟನೆಯೂ ಇಡೀ ಹೋರಾಟದ ಸಾಗರಕ್ಕೆ ಸೇರಿದೆ.

ಈ ದ. ಆಫ್ರಿಕಾದ ರಾಕ್ಷಸೀ ಸರಕಾರಕ್ಕೆ ಆಧಾರ ಸ್ತಂಭವಾಗಿರುವ ಅಮೇರಿಕಾದಲ್ಲಿ ಇತರ ಪಾಶ್ಚಿಮಾತ್ಯ ದೇಶಗಳಲ್ಲಿ, ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ಗೆ ಜನ ಬೆಂಬಲ ಹೆಚ್ಚುತ್ತಿದೆ. ಅಮೇರಿಕಾದ ವಿರೋಧ ಪಕ್ಷ ಡೆಮಾಕ್ರಾಟ್ ಪಕ್ಷದ ನಾಯಕರು, ಬ್ರಿಟನ್ನಿನ ಲೇಬರ್ ಪಕ್ಷದ ನಾಯಕರು ದ. ಆಫ್ರಿಕಾ ವರ್ಣ ಬೇಧ ನೀತಿಗೆ ತೀವ್ರ ವಿರೋಧ ವ್ಯಕ್ತ ಪಡಿಸಬೇಕಾಗಿ ಬಂದಿದೆ.

ಇದರಿಂದಾಗಿ ಅಮೇರಿಕನ್, ಬ್ರಿಟಿಷ್, ಫ್ರೆಂಚ್ ಬಂಡವಾಳ ಶಾಹಿಗಳು ಕಂಗಾಲಾಗಿದ್ದಾರೆ. ವರ್ಣ ದ್ವೇಷ ಸರಕಾರಕ್ಕೆ ಅವರ ಒತ್ತಾಸೆ ಈಗ ಅವರಿಗೇ ತಿರುಗು ಬಾಣವಾಗಿದೆ.

ಒಟ್ಟಿನಲ್ಲಿ ಇಡೀ ದ. ಆಫ್ರಿಕಾ ಕುದಿಯುತ್ತಿದೆ. ವರ್ಗ ಸಂಘರ್ಷ ತನ್ನ ತೀವ್ರ ಸ್ಥಿತಿಯನ್ನು ತಲುಪುತ್ತಿದೆ.

ಇದಕ್ಕೆ ಭಾರತದ ಕಾರ್ಮಿಕ ವರ್ಗ, ಜೂನ್ 16 ರಂದು ಅಪಾರ್ಥೀಡ್ ವಿರೋಧಿ ದಿನಾಚರಣೆಯ ಮೂಲಕ ತನ್ನ ಬೆಂಬಲವನ್ನು ಸೂಚಿಸುತ್ತಿದೆ.]

ದಕ್ಷಿಣ ಆಫ್ರಿಕಾದಲ್ಲಿ ಕರಿಯ ಹೋರಾಟಗಾರರು ಹಾಗೂ ಬಿಳಿಯ ಜನಾಂಗ ದ್ವೇಷಿಗಳ ನಡುವೆ ಘರ್ಷಣೆಗಳು ಈಗ ನಿತ್ಯದ ಸುದ್ದಿಯಾಗಿದೆ. ಕಳೆದ ಸುಮಾರು ಎರಡೂವರೆ ವರ್ಷಗಳಲ್ಲಿ ದಕ್ಷಿಣ ಆಫ್ರಿಕಾ ಕಂಡಷ್ಟು ಪ್ರತಿಭಟನೆಗಳನ್ನು, ಮತಪ್ರದರ್ಶನಗಳನ್ನು ತನ್ನ ಇತಿಹಾಸದಲ್ಲೇ ಹಿಂದೆಂದೂ ಕಂಡಿರಲಿಲ್ಲವೆಂದು ಹೇಳಲಾಗುತ್ತಿದೆ. ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ಸಿನ ನೇತೃತ್ವದಲ್ಲಿ 23 ದಶಲಕ್ಷ ಕರಿಯರು ಹಾಗೂ ವರ್ಣೀಯರು ಜನಾಂಗ ದ್ವೇಷದ ಕೋಟೆಗಳನ್ನು ಒಂದೊಂದಾಗಿ ಬೇಧಿಸುತ್ತಿದ್ದಾರೆ.



ವರ್ಣ ದ್ವೇಷದ ಶೃಂಖಲೆಯಲ್ಲಿ ದ. ಆಫ್ರಿಕಾ

ಪೋಲೀಸರನ್ನು ಬಳಸಿ ಈ ಹೋರಾಟಗಳನ್ನು ದಮನ ಮಾಡುವಲ್ಲಿ ವಿಫಲಗೊಂಡ ಬೋಥಾ ಸರಕಾರ ನಿಶ್ಶಸ್ತ್ರ ಆಫ್ರಿಕನ್ನರ ಮೇಲೆ ಸಾವಿರಾರು ಸಶಸ್ತ್ರ ಸೈನಿಕರನ್ನು ಹರಿಯಬಿಟ್ಟಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಸುಮಾರು 1400 ಕ್ಕೂ ಹೆಚ್ಚು ಕರಿಯ ಹೋರಾಟಗಾರರನ್ನು ಬೋಥಾ ಸರಕಾರ ಕೊಂದಿದೆ. ಮತ ಪ್ರದರ್ಶಕರ ಮೇಲೆ ಭೀಷಣ ಮದ್ದುಗುಂಡುಗಳ ಪ್ರಯೋಗ ಈಗ ಸರ್ವೇಸಾಧಾರಣವಾಗಿ ಬಿಟ್ಟಿದೆ.

1984 ರಲ್ಲಿ ಜನಾಂಗ ದ್ವೇಷಿ ಬೋಥಾ ತನ್ನ ಸರಕಾರದ ಧೋರಣೆಯಲ್ಲಿ ಕೆಲವು "ಸುಧಾರಣೆಗ"ಳನ್ನು ತರುವುದಾಗಿ ಘೋಷಿಸಿದರು. ಆದರೆ ಇವು ನಿಜವಾಗಿಲ್ಲ. "ಸುಧಾರಣೆ"ಗಳಲ್ಲಿ ಜನಾಂಗ ದ್ವೇಷ ನೀತಿಯನ್ನು "ಆಧುನೀಕರಿಸಿ" ಶಾಶ್ವತಗೊಳಿಸುವ ಯತ್ನ ಎಂದು ಈ "ಸುಧಾರಣೆ"ಗಳನ್ನು ಆರಂಭದಲ್ಲಿ ಬೆಂಬಲಿಸಿದರೂ ಒಪ್ಪಿಕೊಳ್ಳಬೇಕಾಗಿ ಬಂತು. ಜನಾಂಗ ದ್ವೇಷಿಗಳು ನಿರೀಕ್ಷಿಸಿದಂತೆ ಇದರಿಂದ ವಿಮೋಚನಾ ಹೋರಾಟ ಸಡಿಲಗೊಳ್ಳುವ ಬದಲು ಇನ್ನಷ್ಟು ಬಲಗೊಂಡಿತು. ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ಸಿನ (ಎ. ಎನ್. ಸಿ. ಯ) ಪ್ರಭಾವ ಇನ್ನಷ್ಟು ವ್ಯಾಪಕಗೊಳ್ಳಲಾರಂಭಿಸಿತು. ಜನಾಂಗ ದ್ವೇಷ ನೀತಿಯನ್ನು ವಿರೋಧಿಸುವ ಸುಮಾರು 700 ಸಂಘಟನೆಗಳ ಸಂಯುಕ್ತ ಪ್ರಜಾ ಪ್ರಭುತ್ವವಾದೀ ರಂಗ (ಯು. ಡಿ. ಎಫ್.) ಸ್ಥಾಪನೆಗೊಂಡು ಹೋರಾಟ ತೀವ್ರಗೊಂಡಿತು. ಕಳೆದ ವರ್ಷ ದಕ್ಷಿಣ ಆಫ್ರಿಕಾ ಕಾರ್ಮಿಕ ಸಂಘಗಳ ಕಾಂಗ್ರೆಸ್ (C.O.S.A.T.U.)ನ ಸ್ಥಾಪನೆಯಾಗಿದೆ ಕಾರ್ಮಿಕ ವರ್ಗವೂ ನೇರವಾಗಿ, ಈ ಹೋರಾಟದಲ್ಲಿ, ಹೆಚ್ಚಳದ ಪಾತ್ರ ವಹಿಸುತ್ತಿದೆ. ಪರಿಸ್ಥಿತಿಯನ್ನು ಎದುರಿಸಲಾಗದ ಬೋಥಾ ಸರಕಾರ ಜುಲೈ 1985 ರಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿ ತೀವ್ರ ದಮನ ಕಾರ್ಯಾಚರಣೆ ನಡೆಸಲಾರಂಭಿಸಿತು. ಇದು ಎಂತಹ ರಾಕ್ಷಸೀ ಸ್ವರೂಪ ಪಡೆದಿದೆಯೆಂದರೆ ಶಾಂತಿಯುತವಾಗಿ ಮತಪ್ರದರ್ಶನ ನಡೆಸುವ ಮಕ್ಕಳ ಮೇಲೂ ಅಮಾನುಷ ಗೋಲೀಬಾರು ನಡೆಯುತ್ತಿದೆ. ಆದರೆ ವಿಮೋಚನಾ ಹೋರಾಟ ಇದರಿಂದಾಗಿ ಶಕ್ತಿಗುಂದುವ ಬದಲು ಇನ್ನಷ್ಟು ವ್ಯಾಪಕಗೊಳ್ಳುತ್ತಿದೆ. ರಾಜಕೀಯ ಘೋಷಣೆಗಳು, ಐಕ್ಯತೆಯ ಘೋಷಣೆಗಳು ಸರ್ವವ್ಯಾಪಿಯಾಗಲಾರಂಭಿಸಿವೆ.

ತನ್ನ ದಮನ ಚಕ್ರದ ವಿಫಲತೆಯನ್ನು ಕಂಡ ಬೋಥಾ ಕಳೆದ ಜನವರಿ ತಿಂಗಳಲ್ಲಿ "ಸುಧಾರಣೆ"ಗಳ ಇನ್ನೊಂದು ಕಂತನ್ನು ಘೋಷಿಸಿದರು. ಕರಿಯರನ್ನೆಲ್ಲಾ ಕೆಲವು ಪ್ರದೇಶಗಳಿಗೆ ಬಲಾತ್ಕಾರವಾಗಿ ಸಾಗಿಸಿ, ದಕ್ಷಿಣ ಆಫ್ರಿಕಾದ ನಾಗರಿಕ ಹಕ್ಕುಗಳನ್ನು ಅವರಿಂದ ಕಿತ್ತುಕೊಂಡು "ಸ್ವತಂತ್ರ ಪ್ರದೇಶ"ಗಳೆಂದು ಹೇಳಲಾದ "ಬಂಟು ಸ್ಥಾನ"ಗಳನ್ನು ಕೆಲವು ವರ್ಷಗಳ ಹಿಂದೆ ರಚಿಸಲಾಗಿತ್ತು. ಇಂತಹ "ಬಂಟು ಸ್ಥಾನ"ಗಳಿಗೆ ಸಾಗಿಸಲ್ಪಟ್ಟ ಕರಿಯರಿಗೆ ದಕ್ಷಿಣ ಆಫ್ರಿಕಾದ ಇತರ ಪ್ರದೇಶಗಳಿಗೆ ಹೋಗುವ ಹಕ್ಕಿರಲಿಲ್ಲ. ಆದರೆ ಜನವರಿ ತಿಂಗಳ "ಸುಧಾರಣೆ"ಗಳಲ್ಲಿ ಈ ಹಕ್ಕನ್ನು ಕೊಡುವುದಾಗಿ ಹೇಳಲಾಯಿತು. ಎಲ್ಲಾ ಜನಾಂಗಗಳು ಭಾಗವಹಿಸಬಹುದಾದ ಒಂದು ರಾಷ್ಟ್ರೀಯ ಮಂಡಳಿ ಸ್ಥಾಪಿಸುವುದಾಗಿಯೂ ಬೋಥಾ ಆಶ್ವಾಸನೆಯಿತ್ತರು. ಆದರೆ ಈ "ಸುಧಾರಣೆ"ಗಳು ಕೇವಲ ಇನ್ನೊಂದು ಮೋಸವೆಂಬುದನ್ನು ಯಾರಿಗೂ ತಿಳಿಯ ಹೇಳಬೇಕಾದ ಅವಶ್ಯಕತೆಯೇ ಬರಲಿಲ್ಲ. ಕೇವಲ ಪಾಶ್ಚಿಮಾತ್ಯ ಸುದ್ದಿ ಮಾಧ್ಯಮಗಳಷ್ಟೇ ಇದನ್ನು ಹಾಡಿ ಹೊಗಳಿದವು.

ದಕ್ಷಿಣ ಆಫ್ರಿಕಾದ ದುಡಿಯುವ ಜನ ಎಳ್ಳಷ್ಟೂ ಹೊಸ ತಂತ್ರದಿಂದ ಮೋಸಹೋಗಲಿಲ್ಲವೆನ್ನುವುದು ಫೆಬ್ರವರಿ ತಿಂಗಳಲ್ಲಿ ಬ್ಲೈವೂರ್ರ್ವಜಿಸ್ಟ್ ಚಿನ್ನದ ಗಣಿಯ ಕಾರ್ಮಿಕರು ನಡೆಸಿದ ಮುಷ್ಕರದಿಂದ ಸ್ಪಷ್ಟಗೊಂಡಿತು. ಸುಮಾರು 8 ಸಾವಿರ ಕಾರ್ಮಿಕರು ಸರಕಾರದ ತೀವ್ರ ದಮನವನ್ನು ಎದುರಿಸಿ ಮುಷ್ಕರ ನಡೆಸಿದರು. ಸರಕಾರದ ದಮನ ಕ್ರಮದಿಂದಾಗಿ ಆರು ಕಾರ್ಮಿಕರು ಕೊಲ್ಲಲ್ಪಟ್ಟರು. 216 ಮಂದಿ ಗಾಯಗೊಂಡರು. ಈ ಮುಷ್ಕರ ತಮ್ಮ ದಾರುಣ ಪರಿಸ್ಥಿತಿ ಸುಧಾರಣೆಗಾಗಿ ಕಾರ್ಮಿಕರು ನಡೆಸಿದ ಹೋರಾಟ ಮಾತ್ರವೇ ಅಲ್ಲ ತಮ್ಮ ಶೋಷಣೆಗೆ ಹೊಣೆಯಾದ ಜನಾಂಗ ದ್ವೇಷ ನೀತಿಯ ವಿರುದ್ಧ ನಡೆಸಿದ ಒಂದು ರಾಜಕೀಯ ಹೋರಾಟವೂ ಆಗಿತ್ತು.

ಈ ವರ್ಷದ ಮಾರ್ಚ್ 21 ರಂದು ಇಪ್ಪತ್ತೈದು ವರ್ಷಗಳ ಹಿಂದೆ ಶಾರ್ಪೆವಿಲ್ಲೆಯಲ್ಲಿ ನಡೆದ ಸಾಮೂಹಿಕ ಹತ್ಯಾಕಾಂಡದಲ್ಲಿ ಕೊಲ್ಲಲ್ಪಟ್ಟ 69 ಹುತಾತ್ಮರಿಗೆ ದಕ್ಷಿಣ ಆಫ್ರಿಕಾದ ಬಹುಸಂಖ್ಯಾತ ಕರಿಯರು ಸಾವಿರಾರು ಸಂಖ್ಯೆಯಲ್ಲಿ ಸಭೆ ಸೇರಿ ದೇಶಪ್ರೇಮದ ಹಾಡುಗಳಿಂದ, ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ಸಿನ ಘೋಷಣೆಗಳನ್ನು ಕೂಗಿ ಗೌರವ ಸಲ್ಲಿಸಿದರು. ಆ ದಿನ ರಾತ್ರಿ ಹಾಗೂ ನಂತರದ ಎರಡು ದಿನ ವರ್ಣ ದ್ವೇಷಿಗಳೊಂದಿಗೆ ನಡೆದ ಘರ್ಷಣೆಗಳಲ್ಲಿ 27 ಕರಿಯರು ಕೊಲ್ಲಲ್ಪಟ್ಟರು.

ಕೆಲವು ಆರ್ಥಿಕ ಕಾರಣಗಳಿಗಾಗಿ ತುರ್ತು ಪರಿಸ್ಥಿತಿಯನ್ನು ಇದೇ ಮಾರ್ಚ್ 7 ರಂದು ಹಿಂತೆಗೆದುಕೊಳ್ಳಲಾಗಿದೆಯಾದರೂ ದಮನ ಚಕ್ರ ಮೊದಲಿನಂತೆಯೇ ಮುಂದುವರಿಯುತ್ತಿದೆ. ಕಳೆದ ಮೂರು ತಿಂಗಳಲ್ಲಿಯೇ ದಿನಕ್ಕೆ ಸರಾಸರಿ 20 ರಂತೆ ಗಲಭೆಗಳು ನಡೆದಿವೆ ಎಂದು ಬೋಥಾ ಸರಕಾರವೇ ಒಪ್ಪಿಕೊಂಡಿದೆ. ಬೋಥಾ ಸರಕಾರದ ಭಯೋತ್ಪಾದಕ ಕ್ರಮಗಳಿಂದಾಗಿ ಜನತೆ ಈಗ ಸಾವಿನ ಭಯವನ್ನೇ ಮರೆತು ಹೋರಾಟದ ಕಣಕ್ಕಿಳಿದಂತೆ ಕಾಣುತ್ತಿದೆ., ಫೆಬ್ರವರಿ ತಿಂಗಳಲ್ಲಿ ಜೋಹಾನ್ಸ್ ಬರ್ಗ್‌ನ ಅಲೆಗ್ಸಾಂಡ್ರಾದ ಬೀದಿಗಳಲ್ಲಿ ಸತತವಾಗಿ ಮೂರು ದಿನಗಳ ಕಾಲ ಕರಿಯ ಜನತೆ ಭೀಷಣ ಕಾಳಗ ನಡೆಸಿದ್ದು ಇದಕ್ಕೆ ಒಂದು ಉದಾಹರಣೆಯಷ್ಟೆ.

ದಕ್ಷಿಣ ಆಫ್ರಿಕಾದ ಜನತೆಯ ಹೋರಾಟ ಈಗ ನಿರ್ಣಾಯಕ ಘಟ್ಟ ತಲುಪಿದೆ. ಇದುವರೆಗೆ ವಿಮೋಚನಾ ಹೋರಾಟಗಾರರಿಗೆ ಅಹಿಂಸಾ ಮಾರ್ಗದ ಬೋಧನೆ ಮಾಡುತ್ತಿದ್ದ ಕರಿಯ ಮುಖಂಡರ ಹಿಂಬಾಲಕರು ಕೂಡಾ ಈಗ ಅಹಿಂಸಾ ಮಾರ್ಗದ ಬೋಧನೆ ಮಾಡುವವರನ್ನು ವರ್ಣ ದ್ವೇಷೀ ಸರಕಾರದ ಭಾಗವಾಗಿ ಕಾಣುವ ಸ್ಥಿತಿ ಬಂದಿದೆ. ವರ್ಣ ದ್ವೇಷಿ ಸರಕಾರದೊಂದಿಗೆ ಸಹಕರಿಸುವ ಕರಿಯರ ವಿರುದ್ಧ ಹಲ್ಲೆಗಳು ಹೆಚ್ಚುತ್ತಿವೆ. ಇಂತಹ ದ್ರೋಹಿಗಳ ಸರಕಾರದಿಂದ ವರ್ಣ ದ್ವೇಷಿಗಳು ಕರಿಯರ ಪ್ರದೇಶಗಳಲ್ಲಿ ನಡೆಸುತ್ತಿರುವ "ಸ್ವಯಮಾಡಳಿತ" ಸಂಸ್ಥೆಗಳು ಕುಸಿಯಲಾರಂಭಿಸಿವೆ. ಅವುಗಳ ಸ್ಥಾನದಲ್ಲಿ ಒಂದು ಜನತಾ ಸರಕಾರದ ಆದಿ ರೂಪವನ್ನು ಪ್ರತಿನಿಧಿಸುವ ಸಮಿತಿಗಳನ್ನು ಜನಗಳೇ ಸ್ವಯಂ ರಚಿಸಿಕೊಳ್ಳುತ್ತಿದ್ದಾರೆ. ಈ ರೀತಿ ರಚನೆಗೊಂಡ ಪ್ರಾದೇಶಿಕ ಹಾಗೂ ಜಿಲ್ಲಾ ಸಮಿತಿಗಳು ಜೋಹಾನ್ಸ್ ಬರ್ಗ್, ಪ್ರಿಟೋರಿಯಾ ಹಾಗೂ ಕೇಪ್ ಪ್ರಾಂತ್ಯದಲ್ಲಿ ಹಲವಾರು ಕಡೆ ಈಗಾಗಲೇ ತಮ್ಮ ಹತೋಟಿ ಸ್ಥಾಪಿಸಿವೆ.

ಜೂನ್ ೧೬ ರಂದು ಅಪಾರ್ಥೀಡ್ ವಿರೋಧಿ ದಿನಾಚರಣೆಯನ್ನು ಯಶಸ್ವಿಗೊಳಿಸಿ

ಆಳಲಾಗದಂತೆ ಮಾಡಿ"

ಅಪಾರ್ಥೀಡ್

ಎಂಬ ವರ್ಣದ್ವೇಷ ನೀತಿಯ

ವಿರುದ್ಧ ಘೋಷಣೆ

ಭಾರತದಲ್ಲಿ ಮೊಟ್ಟಮೊದಲಬಾರಿಗೆ ನಡೆದ ವಿಶಿಷ್ಟ ರೀತಿಯ ಸಭೆ. ಭಾರತದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳೂ ಭಾಗವಹಿಸಿದ್ದ ಅಪೂರ್ವ ಸಭೆ. ಇಂಟಕ್, ಸಿಟು, ಏಟಕ್, ಎಚ್. ಎಂ. ಎಸ್, ಬಿ. ಎಂ. ಎಸ್. ಯುಟಿಯುಸಿ, ಟಿಯುಸಿಸಿ, ಯುಟಿಯುಸಿ (ಲೆನಿನ್ ಸರಣಿ) ಎಲ್ಲ ಸೇರಿದ್ದ ಆ ಸಭೆಯಲ್ಲಿ ಅಂಗೀಕರಿಸಿದ ಘೋಷಣೆ.

ಜಗತ್ತಿನಲ್ಲಿ ಎಲ್ಲಿ ಮಾನವ ಹಕ್ಕುಗಳಿಗೆ ಹಾನಿಯಾದರೂ, ನಿರಾಕರಿಸಲ್ಪಟ್ಟರೂ, ವಿಶ್ವದ ಎಲ್ಲೆಡೆಯಲ್ಲಿಯೂ ಸ್ವಾತಂತ್ರ್ಯಕ್ಕೆ, ಸ್ವಾಯತ್ತತೆಗೆ ಧಕ್ಕೆಯಾಗುತ್ತದೆ.

ಈ ಹೇಯ, ಅಥವಾ ಪ್ರವೃತ್ತಿ ದಕ್ಷಿಣ ಆಫ್ರಿಕದ ವರ್ಣದ್ವೇಷಿ ಆಡಳಿತದಡಿಯಲ್ಲಿ ಅತ್ಯಂತ ಕ್ರೂರ ರೂಪದಲ್ಲಿ ಪ್ರಕಟವಾಗಿದೆ.

ಕೆಲವು ಸರಕಾರಗಳು ಪ್ರಕಟವಾಗಿ ಸ್ವಾತಂತ್ರ್ಯ ಮತ್ತು ಮಾನವನ ಘನತೆಯಲ್ಲಿ ನಂಬಿಕೆಯನ್ನು ಘೋಷಿಸಿದರೂ ವಿಶ್ವಾಭಿಪ್ರಾಯವನ್ನು ಧಿಕ್ಕರಿಸಿ ಈ ವರ್ಣದ್ವೇಷಿ ಸರಕಾರಕ್ಕೆ ರಾಜಕೀಯ, ಆರ್ಥಿಕ, ಮಿಲಿಟರಿ ಬೆಂಬಲವನ್ನು ನೀಡಿ ಅದನ್ನು ಕಾಪಾಡುತ್ತಿವೆ.

ಸಂಘಟಿತ ಕಾರ್ಮಿಕ ವರ್ಗ ಇಂತಹ ಎಲ್ಲಾ ಅಸಹ್ಯಕರ ರೀತಿ ನೀತಿಗಳ ವಿರುದ್ಧ ಹೋರಾಟದ ಮುಂಚೂಣಿಯಲ್ಲಿರುತ್ತದೆ. ಹೋರಾಟಕ್ಕೆ ಎಲ್ಲಾ ಬೆಂಬಲ ನೀಡುತ್ತದೆ.

ಫೆಬ್ರುವರಿ 15–17 ರಂದು ಸೇರಿದ ಭಾರತದ ಕೇಂದ್ರ ಕಾರ್ಮಿಕ ಸಂಘಟನೆಗಳ ಸಭೆ ಈ ಘೋಷಣೆಯನ್ನು ಅಂಗೀಕರಿಸಿದೆ.


— ಭಾರತದ ಕಾರ್ಮಿಕ ವರ್ಗ, ದಕ್ಷಿಣ ಆಫ್ರಿಕಾ ವಿಮೋಚನಾ ಚಳುವಳಿಯ ಪಟ್ಟುಬಿಡದ, ನಿರಂತರ ಹೋರಾಟವನ್ನು ತನ್ನದೇ ಹೋರಾಟವೆಂದು ಪರಿಗಣಿಸುತ್ತದೆ. ಅಪಾರ್ಥೀಡ್‌ಅನ್ನು ತೊಡೆದು ಹಾಕಲು ಧೃಡ ತೀರ್ಮಾನ ಮಾಡಿರುವ ದ. ಆಫ್ರಿಕ ಕಾರ್ಮಿಕ ಸಂಘಗಳ ಕಾಂಗ್ರೆಸ್ ಹಾಗೂ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ಗಳನ್ನು ಎಲ್ಲಾ ರೀತಿಯಲ್ಲಿಯೂ ಬಲಪಡಿಸಲು ಧೃಡ ನಿರ್ಧಾರ ಮಾಡುತ್ತದೆ.

— ಎಲ್ಲರ ಮನೆಮಾತಾಗಿರುವ ನೆಲ್ಸನ್ ಮಾಂಡೆಲಾ ಹಾಗೂ ಅವರ ಜೊತೆಯಲ್ಲಿ ಸೆರೆಮನೆಗಳಲ್ಲಿ ಕೊಳೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರ ಬಿಡುಗಡೆಗಾಗಿ ವಿಶ್ವಕಾರ್ಮಿಕ ವರ್ಗ ಹೂಡುವ ಎಲ್ಲಾ ಅಂತರರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುತ್ತದೆ.

— ಸ್ವಾಪೋದ ನಾಯಕತ್ವದಲ್ಲಿನ ನಮೀಬಿಯ ಸ್ವಾತಂತ್ರ್ಯ ಹೋರಾಟಕ್ಕೆ ಭಾರತದ ಜನಸಮುದಾಯ ತನಗೆ ಸಾಧ್ಯವಿರುವ ಎಲ್ಲ ಕ್ರಮಗಳ ಮೂಲಕ ಬೆಂಬಲ ವ್ಯಕ್ತಪಡಿಸುತ್ತದೆ.

— ಭಾರತದ ಕಾರ್ಮಿಕರು ರಾಷ್ಟ್ರೀಯ ಅಪಾರ್ಥೀಡ್ ವಿರೋಧಿ ದಿನವನ್ನು ಆಚರಿಸುವ ಸಮಯದಲ್ಲಿಯೇ ಈ ಕಾರ್ಮಿಕ ವರ್ಗದ ಪ್ರತಿನಿಧಿ ಸಂಘಟನೆಗಳು ವಿಶ್ವಕಾರ್ಮಿಕ ಸಮುದಾಯವನ್ನು ಜಾಗತಿಕ ಅಪಾರ್ಥೀಡ್ ವಿರೋಧಿ ದಿನವನ್ನಾಚರಿಸಲು ಒತ್ತಾಯಿಸುತ್ತದೆ.

ಈ ರಾಷ್ಟ್ರೀಯ ಅಪಾರ್ಥೀಡ್ ವಿರೋಧಿ ದಿನಾಚರಣೆಯು ವರ್ಣೀಯ ಸರಕಾರದ ಅತಿ ಶೀಘ್ರ ನಿರ್ಮೂಲನಕ್ಕಾಗಿ ನಡೆಯುವ ಚಳುವಳಿಯನ್ನು ನಿರಂತರವಾಗಿ ಬೆಂಬಲಿಸಲು ಬಲಪಡಿಸಲು ಆ ಚಳುವಳಿಯಲ್ಲಿ ಭಾಗವಹಿಸಲು ಭಾರತೀಯ ಕಾರ್ಮಿಕ ವರ್ಗ ಕಂಕಣಬದ್ಧವಾಗಿರುವುದರ ಸಂಕೇತ.



ನೆಲ್ಸನ್ ಮಾಂಡೆಲಾ

ವರ್ಣ ದ್ವೇಷಿಗಳ ರಾಜ್ಯಕೀಯ ಸ್ಥಾನಮಾನ ದುರ್ಬಲಗೊಳ್ಳುತ್ತಿದ್ದರೆ, ಅದರ ವಿರೋಧಿಗಳ ಸಂಖ್ಯೆ, ಬಲ ಹೆಚ್ಚುತ್ತಿದೆ. ಬಿಳಿಯರಲ್ಲೂ ಹಲವು ಮಂದಿ ವರ್ಣ ದ್ವೇಷಿಗಳ ವಿನಾಶಕಾರೀ ಧೋರಣೆಯನ್ನು ವಿರೋಧಿಸಲಾರಂಭಿಸಿದ್ದಾರೆ. ಅಂತರ್ರಾಷ್ಟ್ರೀಯವಾಗಿಯೂ ಸಾಮ್ರಾಜ್ಯಶಾಹೀ ಪಾಶ್ಚಿಮಾತ್ಯ ದೇಶಗಳ ಆಳುವ ವಲಯಗಳನ್ನು ಬಿಟ್ಟು ಬೇರೆಲ್ಲಾ ದೇಶಗಳಿಂದಲೂ ಜನಗಳಿಂದಲೂ ವರ್ಣ ದ್ವೇಷಿಗಳು ತೀವ್ರ ಖಂಡನೆಗೊಳಗಾಗುತ್ತಿದ್ದಾರೆ. ದಕ್ಷಿಣ ಆಫ್ರಿಕಾದ ಜನತೆ ಆದಾಗಲೇ ವರ್ಣ ದ್ವೇಷ ನೀತಿಯ ಬಗ್ಗೆ ತಮ್ಮ ತೀರ್ಪು ನೀಡಿ ಅದನ್ನೀಗ ಕಾರ್ಯಗತಗೊಳಿಸುತ್ತಿದ್ದಾರೆ !

ಅಮೇರಿಕಾ–ವರ್ಣ ದ್ವೇಷಿಗಳ ರಚನಾತ್ಮಕ ಬಾಂಧವ್ಯ ?

ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾದಲ್ಲಿ ವರ್ಣದ್ವೇಷಿ ಆಡಳಿತ ಅಮಾನವೀಯ ಕುಕೃತ್ಯ ಎಸಗಿದಾಗಲೆಲ್ಲಾ ವಿಶ್ವದ ಬಹಳಷ್ಟು ಜನ ಅದನ್ನು ತೀವ್ರವಾಗಿ ಖಂಡಿಸಿ ದಕ್ಷಿಣ ಆಫ್ರಿಕಾ ವಿರುದ್ಧ ಆರ್ಥಿಕ ನಿರ್ಬಂಧನೆ ಹೊರಿಸಬೇಕೆಂದು ಒತ್ತಾಯಿಸುವುದು, ಅಮೆರಿಕಾ ಮತ್ತು ಬ್ರಿಟನ್ ಮುಂತಾದ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳು ಇಂತಹ ನಿರ್ಬಂಧನೆಗಳಿಂದ ಏನೂ ಉಪಯೋಗವಾಗುವುದಿಲ್ಲ, ಬದಲಾಗಿ ದಕ್ಷಿಣ ಆಫ್ರಿಕಾದ ಕರಿಯ ಜನತೆಗೇ ತೊಂದರೆ ಕೊಟ್ಟಂತಾಗುವುದು ಎಂದು ವಾದಿಸುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಈ ಕುತರ್ಕದ ಹಿಂದೆ ನಿಜವಾಗಿ ಇರುವುದು ಅಮೆರಿಕಾ, ಬ್ರಿಟನ್ ಹಾಗೂ ಇತರ ಬಂಡವಾಳಶಾಹೀ ದೇಶಗಳ ಆಳುವ ವಲಯಗಳ ಆರ್ಥಿಕ ಹಿತಾಸಕ್ತಿಗಳೇ ವಿನಃ ಬೇರೇನೂ ಇಲ್ಲ.

ದಕ್ಷಿಣ ಆಫ್ರಿಕಾ ಯುರೇನಿಯಂ, ಪ್ಲಾಟಿನಂ, ಕೋಬಾಲ್ಟ್, ಚಿನ್ನ ಹಾಗು ಮ್ಯಾಂಗನೀಸ್ ಮುಂತಾದ ಅಗಾಧ ಸಂಪನ್ಮೂಲಗಳಿಂದ ಕೂಡಿದ ಪ್ರದೇಶ. ಇದಕ್ಕೆ ಅಮೆರಿಕಾ ಹಾಗೂ ಇತರ ಪಾಶ್ಚಿಮಾತ್ಯ ದೇಶಗಳು ಪ್ರಮುಖ ಗಿರಾಕಿಗಳು. ಪಾಶ್ಚಿಮಾತ್ಯ ಬಂಡವಾಳಶಾಹೀ ದೇಶಗಳ ಪರಮಾಣು ಶಕ್ತಿಯ ಸಾಮರ್ಥ್ಯ ಬಹಳಷ್ಟು ದಕ್ಷಿಣ ಆಫ್ರಿಕಾದ ಯುರೇನಿಯಂ ಮೇಲೆ ಅವಲಂಬಿಸಿದೆ. ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ(IABA)ನ ಹತೋಟಿಯನ್ನು ಬದಿಗೊತ್ತಿ ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಸರಕಾರಗಳು ಯುರೇನಿಯಂನ್ನು ಈ ದೇಶಗಳಿಗೆ ಮಾರುತ್ತಾ ಬಂದಿದೆ. ಅಮೆರಿಕಾ ದಕ್ಷಿಣ ಆಫ್ರಿಕಾದ ಪ್ರಥಮ ಮೂರು ವಾಣಿಜ್ಯ ಪಾಲುದಾರರಲ್ಲಿ ಒಂದು.

ಅಮೆರಿಕಾದ ಮಿಲಿಟರಿ ಕೈಗಾರಿಕಾ ಕೂಟಕ್ಕೆ ಬೇಕಾದ ಮಹತ್ವದ ಅದುರುಗಳಲ್ಲಿ ಅರ್ಧದಷ್ಟು ಆಫ್ರಿಕಾಖಂಡದ ದಕ್ಷಿಣದ ದೇಶಗಳಿಂದಲೇ ಬರುತ್ತಿದೆ. ಇಂತಹ 27 ಮಹತ್ವದ ಕಚ್ಚಾ ಸಾಮಗ್ರಿಗಳಲ್ಲಿ ಹನ್ನೊಂದು ದಕ್ಷಿಣ ಆಫ್ರಿಕಾವೊಂದರಿಂದಲೇ ಬರುತ್ತಿದೆ.

ಜಾಗತಿಕ ಬಂಡವಾಳಶಾಹೀ ಅರ್ಥವ್ಯವಸ್ಥೆಗೆ ಬೇಕಾಗುವ ಯುರೇನಿಯಂನ 15% ವನ್ನು ನಮೀಬಿಯಾದಿಂದಲೇ ಪಡೆಯಲಾಗುತ್ತಿದೆ.

(7ನೇ ಪುಟ ನೋಡಿ)

ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ

ಬಿಳಿಯ ವಲಸೆಗಾರರು ದಕ್ಷಿಣ ಆಫ್ರಿಕಾವನ್ನು ತಮ್ಮ "ಗಣರಾಜ್ಯ" ವೆಂದು ಹೇಳಿಕೊಳ್ಳುತ್ತಾರೆ. ಆದರೆ ಈ "ಗಣರಾಜ್ಯ"ದಲ್ಲಿ ಮತಾಧಿಕಾರವಿರುವುದು 18% ವಷ್ಟಿರುವ ಬಿಳಿಯ ಜನಾಂಗಗಳವರಿಗೆ ಮಾತ್ರ. ಉಳಿದವರು ಅಂದರೆ ಕರಿಯರು. ಭಾರತೀಯ ಸಂತತಿಯವರು ಹಾಗೂ ಮಿಶ್ರ ಜನಾಂಗದವರು. ಬಿಳಿಯರ ಜೀವನಾವಶ್ಯಕತೆಗಳನ್ನು ಪೂರೈಸಲು ಹಾಗೂ ದೇಶದ ಸಂಪತ್ತನ್ನು ಹೆಚ್ಚಿಸಲು ತೋಟಗಳಲ್ಲಿ, ಚಿನ್ನದ ಗಣಿಗಳಲ್ಲಿ ಹಾಗೂ ಕೈಗಾರಿಕೋದ್ಯಮಗಳಲ್ಲಿ ದುಡಿಯಲಿಕ್ಕಾಗಿಯೇ ಇರುವ ಯಂತ್ರ ಸಮಾನ ಜೀವಿಗಳು. ಕೆಲವು ಅಂಕೆ ಸಂಖ್ಯೆಗಳನ್ನು ಗಮನಿಸಬಹುದು.

ಬಿಳಿಯ ವಲಸೆಗಾರರ ದಬ್ಬಾಳಿಕೆ

ಸುಮಾರು 18% ಇರುವ ಬಿಳಿಯರು ದೇಶದ 87% ಜಮೀನಿನ ಮೇಲೆ ಒಡೆತನ ಸ್ಥಾಪಿಸಿದ್ದಾರೆ. ಉಳಿದ 13% ಜಮೀನನ್ನು ಕರಿಯರಿಗಾಗಿ "ಮೀಸಲು" ಇಡಲಾಗಿದೆ. ಈ 13% ಹೆಚ್ಚೇನು ಉಪಯೋಗಕ್ಕೆ ಬಾರದ ಜಮೀನು ಎಂದು ಬೇರೆ ಹೇಳಬೇಕಾಗಿಲ್ಲ.

ದೇಶದ ಅರ್ಧದಷ್ಟು ಕರಿಯರು ಹಾಗೂ ಇತರ ವರ್ಣೀಯರು ಬಿಳಿಯರ ಫಾರ್ಮ್‌ಗಳಲ್ಲಿ, ಗಣಿಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಉಳಿದರ್ಧ ಜನ ಈ 13% ಬಂಜರು ಭೂಮಿಯಲ್ಲಿ ಯಾವ ಜೀವನಾಧಾರವೂ ಇಲ್ಲದೆ ಹೇಗೋ ಜೀವನ ಸಾಗಿಸುತ್ತಿದ್ದಾರೆ. ಫಾರ್ಮ್, ಗಣಿ, ಕೈಗಾರಿಕೆಗಳಲ್ಲಿ ತಮ್ಮ ಕೆಲಸದ ಕರಾರಿನ ಅವಧಿ ಮುಗಿದ ಮೇಲೆ ಬಿಳಿಯರ ಕ್ಷೇತ್ರಗಳಲ್ಲಿರುವ ಕರಿಯರಿಗೂ ಅಲ್ಲಿರುವ ಹಕ್ಕು ಇರುವುದಿಲ್ಲ. ಅವರೂ "ಮೀಸಲು" ಕ್ಷೇತ್ರಗಳಿಗೆ ವಾಪಸಾಗಬೇಕು.

ಈಗ 18% ಬಿಳಿಯರು ದೇಶದ ಆದಾಯದ 70% ದಷ್ಟನ್ನು ಅನುಭೋಗಿಸುತ್ತಿದ್ದಾರೆ.

ಇದರ ಫಲವಾಗಿಯೇ 1912 ರ ಜನವರಿ 8 ರಂದು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಸೌತ್ ಆಫ್ರಿಕಾ)

(6ನೇ ಪುಟ ನೋಡಿ)

ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ

(5ನೇ ಪುಟದಿಂದ)

(ಅಥವಾ ಸಂಕ್ಷೇಪವಾಗಿ ಎ.ಎನ್.ಸಿ.) ಸ್ಥಾಪನೆಯಾಯಿತು. ಇಲ್ಲಿಂದ ಬಿಳಿಯರ ವಿರುದ್ಧ ಹೋರಾಟ ಮುಂದುವರಿದಂತೆ ಭಾರತೀಯ ವಂಶದ ಜನರಿಂದಲೂ ಮಿಶ್ರ ಸಂತತಿಯವರಿಂದಲೂ ಎ. ಎನ್. ಸಿ. ಗೆ ಹೆಚ್ಚೆಚ್ಚು ಬೆಂಬಲ ದೊರೆಯಲಾರಂಭಿಸಿತು. 1920 ರಲ್ಲಿ ಗಣಿಕಾರ್ಮಿಕರೂ ಸರಕಾರದ ವಿರುದ್ಧ ಎದ್ದುನಿಂತು ಮುಷ್ಕರ ಹೂಡಿದರು. 1921ರಲ್ಲಿ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಜನ್ಮತಾಳಿತು.

1950ರಲ್ಲಿ ವರ್ಣದ್ವೇಷ ನೀತಿಯ ವಿರುದ್ಧ ಬಲವಾದ ಚಳುವಳಿಗಳು ನಡೆದವು. ಕರಿಯರು, ಭಾರತೀಯರು, ವರ್ಣೀಯರು ಎಲ್ಲರೂ ಇದರಲ್ಲಿ ಭಾಗವಹಿಸಿದರು. ಭಯಭೀತಿಗೊಂಡ ಸರಕಾರ ಪೋಲೀಸ್ ದಬ್ಬಾಳಿಕೆಯ ಮೂಲಕ ವರ್ಣಭೇದದ ಕಾನೂನುಗಳನ್ನು ಮತ್ತಷ್ಟು ಬಿಗಿಗೊಳಿಸುವುದರ ಮೂಲಕ ಪ್ರತಿಕ್ರಿಯಿಸಿತು. 1952ರಲ್ಲಿ ಇನ್ನೂ ತೀವ್ರತರವಾದ "ನಿರಾಕರಣ ಚಳುವಳಿ"ಗಳು ನಡೆದವು. ಸರಕಾರ ಇದನ್ನು ಎದುರಿಸಲು ಎಮರ್ಜೆನ್ಸಿ ಅಧಿಕಾರವನ್ನು ಉಪಯೋಗಿಸಿತು. ವರ್ಣಭೇದ ಕಾನೂನುಗಳು ಇನ್ನಷ್ಟು ಬಿಗಿಯಾದವು.

ಹೋರಾಟದ ಹೊಸ ಘಟ್ಟ ಸ್ವಾತಂತ್ರ್ಯ ಮಹಾ ಪತ್ರ

ಹೆಚ್ಚುತ್ತಿದ್ದ ದಬ್ಬಾಳಿಕೆ ವಿವಿಧ ಆಫ್ರಿಕನ್ ಬಣಗಳನ್ನು ಮಾತ್ರವಲ್ಲ ಶೋಷಣೆಗೊಳಗಾದ ಎಲ್ಲರನ್ನೂ ಒಂದೆಡೆ ತಂದಿತು. ಅದುವರೆಗೆ ಕೇವಲ ಆಫ್ರಿಕನ್‌ರ ಪ್ರತಿಭಟನೆಯ ಸಂಘಟನೆಯಾಗಿದ್ದ ANC ಈಗ ಒಂದು ಸ್ಪಷ್ಟವಾದ ರಾಜಕೀಯಹಾಗೂ ಸೈದ್ಧಾಂತಿಕ ಆಧಾರವನ್ನು ರೂಪಿಸಿಕೊಳ್ಳಬೇಕೆಂಬುದು ವಿಮೋಚನಾ ಹೋರಾಟಗಾರರಿಗೆ ಅನ್ನಿಸಿತು. ಇದರ ಫಲವಾಗಿ 1955 ರಲ್ಲಿ ದಕ್ಷಿಣ ಆಫ್ರಿಕಾದ ಜನತೆಯ ಮಹಾಸಮ್ಮೇಳನ ನಡೆದು ಒಂದು "ಸ್ವಾತಂತ್ರ್ಯ ಮಹಾಪತ್ರ"ವನ್ನು ಅಂಗೀಕರಿಸಲಾಯಿತು. ಇದು ANC ಯನ್ನು ಕಾರ್ಮಿಕರು ಕೃಷಿಕೂಲಿಗಾರರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಕಮ್ಯುನಿಸ್ಟರು, ಇತರ ದೇಶಭಕ್ತರು. ಕರಿಯರು, ಭಾರತೀಯರು, ವರ್ಣೀಯರು ಹಾಗೂ ಪ್ರಜಾಪ್ರಭುತ್ವವಾದೀ ಬಿಳಿಯರು ಇವರೆಲ್ಲರ ಸಂಯುಕ್ತ ರಂಗವನ್ನಾಗಿ ಮಾರ್ಪಡಿಸಿತು.

"ದಕ್ಷಿಣ ಆಫ್ರಿಕಾ ಅದರಲ್ಲಿ ವಾಸಿಸುವ ಕರಿಯರಿಗೆ, ಬಿಳಿಯರಿಗೆ ಹಾಗೂ ಎಲ್ಲರಿಗೂ ಸೇರಿದೆ. ಜನತೆಯ ನಿರ್ಣಯಕ್ಕನುಸಾರವಾಗಿ ಇಲ್ಲದ ಯಾವ ಸರಕಾರವೂ ತನಗೆ ಅಧಿಕಾರವಿದೆಯೆಂದು ನ್ಯಾಯಬದ್ಧವಾಗಿ ಹೇಳಿಕೊಳ್ಳಲು ಸಾಧ್ಯವಿಲ್ಲ.....ನಾವು ಅಂದರೆ ಜನತೆ ಆಡಳಿತ ನಡೆಸುತ್ತೇವೆ" ಎಂದು ಸ್ವಾತಂತ್ರ್ಯ ಮಹಾಪತ್ರ ಘೋಷಿಸುತ್ತದೆ.

1960ರ ದಶಕದ ಆರಂಭದಲ್ಲಿ ವರ್ಣದ್ವೇಷ ನೀತಿಯಿಂದ ರೋಸಿಹೋದ ಜನತೆ ಅಲ್ಲಲ್ಲಿ ಬೀದಿಗಿಳಿದು ತಮ್ಮ ಅಸಹನೆ, ಕ್ರೋಧವನ್ನು ಪ್ರದರ್ಶಿಸಲಾರಂಭಿಸಿದರು. ಶಾರ್ಪ್‌ವಿಲೆ ಎಂಬಲ್ಲಿ ನಡೆದ ಇಂತಹ ಒಂದು ಶಾಂತಿಯುತ ಪ್ರದರ್ಶನದಲ್ಲಿ ಪೋಲೀಸರು ಅನವಶ್ಯಕವಾಗಿ ಗುಂಡಿನ ಸುರಿಮಳೆ ಸುರಿಸಿ 67 ಜನರನ್ನು ಕೊಲೆಮಾಡಿದರು. 180ಕ್ಕೂ ಹೆಚ್ಚು ಮಂದಿಗಾಯಗೊಂಡರು ವಿಮೋಚನಾ ಹೋರಾಟಗಳ ಜನಪ್ರಿಯತೆ ಈ ರೀತಿ ಹೆಚ್ಚುತ್ತಿರುವುದನ್ನು ಕಂಡು ಭಯಗೊಂಡ ಸರಕಾರ A. N. C. ಹಾಗೂ ಇತರ ವಿಮೋಚನಾ ಸಂಘಟನೆಗಳ ಕಾರ್ಯಚಟುವಟಿಕೆಗಳನ್ನು ನಿಷೇಧಿಸಿತು. ಹೋರಾಟಗಾರರ ಮೇಲೆ ಫ್ಯಾಸಿಸ್ಟ್ ಹಿಂಸಾಚಾರ ನಡೆಸಿತು ಪರಿಣಾಮವಾಗಿ ಅದುವರೆಗೆ ಶಾಂತಿಯುತವಿಧಾನಗಳಿಂದ ಹೋರಾಡುತ್ತಿದ್ದ ANC ನಿರ್ವಾಹವಿಲ್ಲದೆ ಸಶಸ್ತ್ರ ಹೋರಾಟದ ಮಾರ್ಗಹಿಡಿಯಬೇಕಾಯಿತು, ANC ಯ ಸೇನಾ ವಿಭಾಗ "ಉಮ್‌ಕೊಂಟೋ ವಿಸಿಜ್ವೆ"ಅಥವಾ "ರಾಷ್ಟ್ರದ ಈಟಿ" ಜನ್ಮ ತಾಳಿತು. ಇದು ದಕ್ಷಿಣ ಆಫ್ರಿಕನ್ನರ ಜನತಾ ಮುಕ್ತಿ ಸೇನೆ. ಈ ಸೇನೆ ಕೆಲವು ಉತ್ಸಾಹೀ ನವಯುವಕರನ್ನು ತನ್ನೆಡೆಗೆ ಆಕರ್ಷಿಸಿತು. ಗುಪ್ತ ಸಶಸ್ತ್ರಹೋರಾಟದ ನಾಯಕ ಮ್ಯಾಂಡೆಲಾರವರನ್ನು ಬಂಧಿಸಿ ಅಜೀವ ಕಾರಾಗೃಹವಾಸ ಶಿಕ್ಷೆ ವಿಧಿಸಿದರೂ ಹೋರಾಟಗಾರರು ಧೃತಿಗೆಡಲಿಲ್ಲ. 1976 ರಲ್ಲಿ ಸೋವೆಟೋ ಎಂಬಲ್ಲಿ ಪ್ರಾರಂಭವಾಗಿ ದೇಶವನ್ನೆಲ್ಲಾ ವ್ಯಾಪಿಸಿದ ಬೃಹತ್ ಪ್ರಮಾಣದ ಮತಪ್ರದರ್ಶನಗಳೇ ಇದಕ್ಕೆ ಸಾಕ್ಷಿ. 1976 ರ ಮೇ ತಿಂಗಳಲ್ಲಿ ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್ ಪ್ರದೇಶದ ಆಡಳಿತಗಾರರು ಆಫ್ರಿಕಾದ ಶಾಲೆಗಳಲ್ಲಿ ಆಫ್ರಿಕಾನ್ಸ್ ಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಅಜ್ಞೆ ಹೊರಡಿಸಿದರು. ಈ ಆಫ್ರಿಕಾನ್ಸ್ ಬಿಳಿಯ ಅಲ್ಪಸಂಖ್ಯಾತರಲ್ಲಿ 60% ರಷ್ಟು ಬಿಳಿಯರು ಮಾತನಾಡುವ ಭಾಷೆ. ವರ್ಣದ್ವೇಷ ನೀತಿಯ ಇತರ ಕಾನೂನುಗಳಿಗೆ ಹೋಲಿಸಿದರೆ ಇದು ಸಾಧುವಾದ ಆಜ್ಞೆಯಾಗಿತ್ತು. ಆದರೂ ಒಳಗೊಳಗೇ ಕುದಿಯುತ್ತಿದ್ದ ಕ್ರೋಧ ಭುಗಿಲೆನ್ನಲು ಇಷ್ಟು ಸಾಕಾಯಿತು. ಜೋಹಾನ್ಸ್‌ಬರ್ಗ್‌ನ ಸಮೀಪವಿರುವ ಸಣ್ಣ ಪಟ್ಟಣ ಸೋವಟೋದಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡ ಪ್ರಮಾಣದಲ್ಲಿ ಮತಪ್ರದರ್ಶನ ನಡೆಯಿತು. ಇದರ ವಿಶೇಷತೆಯೆಂದರೆ ಅದರಲ್ಲಿ ಭಾಗವಹಿಸಿದವರು ಇನ್ನೂ ಎಳೆಯ ಪ್ರಾಯದ ಶಾಲೆಗೆ ಹೋಗುವ ವಯಸ್ಸಿನ ಹುಡುಗ, ಹುಡುಗಿಯರು. "ದೇಶದ ಹೊಚ್ಚ ಹೊಸ ಪೀಳಿಗೆ ತನ್ನ ದೇಶದ ಭವಿಷ್ಯದ ಬಗ್ಗೆ ತಮ್ಮ ಭಾವನೆಯೇನಿದೆಯೆಂಬುದನ್ನು ಧೈರ್ಯವಾಗಿ, ಸ್ಪಷ್ಟವಾಗಿ ತೋರಿಸಿಕೊಟ್ಟಿದೆ" ಎಂದು ಒಬ್ಬ ಲೇಖಕರು ಇದನ್ನು ವರ್ಣಿಸಿದ್ದಾರೆ. ಯಥಾಪ್ರಕಾರ ಪೋಲೀಸರು ಗೋಲೀಬಾರು ನಡೆಸಿದರು. ಅಧಿಕೃತವಾಗಿ 1/4 ಆಫ್ರಿಕನ್ ವಿದ್ಯಾರ್ಥಿಗಳು ಬಲಿಯಾದರು. ಅನಧಿಕೃತ ಸಂಖ್ಯೆ ಇನ್ನೂ ಹೆಚ್ಚಿದೆ. ಆದರೂ ಪ್ರತಿಭಟನೆ ನಿಲ್ಲಲಿಲ್ಲ. ಅದು ಒಂದು ಪಟ್ಟಣದಿಂದ ಇನ್ನೊಂದಕ್ಕೆ ಹರಡುತ್ತಾ ಹೋಯಿತು. ಶಾಲೆಗಳನ್ನು ಸುಡಲಾಯಿತು, ತರಗತಿಗಳು ಖಾಲಿಯಾದವು, ಬಿಳಿಯರಿಗೆ ಹತ್ತಿರ ಬರಲೂ ಅವಕಾಶದೊರೆಯಲಿಲ್ಲ. ಮೇ 1976ರ ನಂತರ ಪ್ರತಿದಿನ ಪ್ರತಿಭಟನೆಯ, ಕ್ರೋಧದ ನಿರ್ಭಯ ಧ್ವನಿ ದ. ಆಫ್ರಿಕಾದ ಎಲ್ಲೆಲ್ಲೂ ಮೊಳಗಲಾರಂಭಿಸಿದೆ.

ಸಿಮ್ಲಾ ;

ಮುನಿಸಿಪಲ್ ಚುನಾವಣೆಗಳಲ್ಲಿ ಮುನ್ನಡೆ

26 ವರ್ಷಗಳ ನಂತರ, ನ್ಯಾಯಾಲಯ ನಿರ್ದೇಶನ ನೀಡಿದ ನಂತರವೇ ನಡೆಸಲಾದ ಸಿಮ್ಲಾದ ಮುನಿಸಿಪಲ್ ಚುನಾವಣೆಗಳಲ್ಲಿ ಸಿ ಪಿ ಐ (ಎಂ) ಜಿಲ್ಲಾ ಘಟಕ ಉತ್ತಮ ಮುನ್ನಡೆ ಸಾಧಿಸಿದೆ. ಮೊದಲ ಬಾರಿಗೆ ಈ ಚುನಾವಣೆಗಳಲ್ಲಿ ಭಾಗವಹಿಸುತ್ತಿದ್ದು, ಪಕ್ಷ 2 ಸ್ಥಾನಗಳನ್ನು ಗಳಿಸಿದೆ. ಹಿಂದೆ ಬಿ ಜೆ. ಪಿ. ನಿಯಂತ್ರಣದಲ್ಲಿದ್ದ ಸಿಮ್ಲಾದ ಮುನಿಸಿಪಾಲಿಟಿಯಲ್ಲಿ ಈ ಚುನಾವಣೆಯ ನಂತರದ ಬಲಾಬಲ ಹೀಗಿವೆ. ಕಾಂಗ್ರೆಸ್ (ಐ) - 8, ಬಿ ಜೆ ಪಿ - 6 ಸಿ ಪಿ ಐ (ಎಂ) - 2, ಜನತಾ – 1, ಲೋಕದಳ - 1, ಪಕ್ಷೇತರರು – 3

ನಮ್ಮ ಪಕ್ಷ, ಬಿ ಜೆ ಪಿ — ಕಾಂಗ್ರೆಸ್ಸೇತರ ಮೂರನೇ ರಂಗದ ಸಿವಿಲ್ ನಾಗರಿಕ ಮೋರ್ಚಾವನ್ನು ಸಂಘಟಿಸುವಲ್ಲಿ ಸಫಲವಾಗಿದ್ದು, 13 ಸ್ಥಾನಗಳಲ್ಲಿ ಸ್ಪರ್ಧಿಸಿ 27% ಮತಗಳಿಸಿದ್ದು ನಿಜವಾಗಿಯೂ ಗಮನಾರ್ಹ ಮುನ್ನಡೆ. ಪಕ್ಷದ ಅಭ್ಯರ್ಥಿ ಜಿಲ್ಲಾ ಕಾರ್ಯದರ್ಶಿ ರಾಕೇಶ ಸಿಂಗ್ ಬೇರೆ ಎಲ್ಲಾ ವಿಜೇತರಿಗಿಂತಲೂ ಅತ್ಯಂತ ಹೆಚ್ಚಿನ ಮತಗಳಿಸಿ ಜಯಗಳಿಸಿದರು. ಸಿ ಪಿ ಐ (ಎಂ) ವಿರುದ್ಧ ಅಪಪ್ರಚಾರ ನಡೆಸಿದ್ದು ಮಾತ್ರ ದುರದೃಷ್ಟಕರ.

O

ವಿದೇಶಿ ಹಣ, ಕ್ರಿಯಾತ್ಮಕ ಗುಂಪುಗಳು ಹಾಗೂ ಕೇಂದ್ರ ಸರಕಾರ

*ಬೆಂಗಳೂರಿನಲ್ಲಿ

ವಿದೇಶಗಳಿಂದ ಹಣ ಪಡೆಯುತ್ತಿರುವವರಲ್ಲಿ ವಿದ್ರೋಹಿಗಳು, ಮತ್ತು ಪ್ರತ್ಯೇಕತಾವಾದಿಗಳೇ ಅಲ್ಲದೆ ವಿವಿಧ ಕೋಮುವಾರು ಮತ್ತು ಮತೀಯ ಮೂಲಭೂತವಾದಿ ಸಂಸ್ಥೆಗಳೂ ಸೇರಿವೆ. ಜಾತಿ ಸಂಘರ್ಷವನ್ನು ಪ್ರತಿಪಾದಿಸುವ ತಥಾ ಕಥಿತ ದಲಿತ ಸಂಘಟನೆಗಳಿಗೂ ಈ ರೀತಿ ರೊಕ್ಕ ದೊರೆಯುತ್ತಿದೆ. ಬೆಂಗಳೂರಿನಿಂದ ಹೊರಡಿಸಲಾಗುತ್ತಿರುವ ಅಪ್ಪಟ ಕಮ್ಯುನಿಸ್ಟ್ ವಿರೋಧಿ ಪತ್ರಿಕೆಯಾದ "ದಲಿತ್ ವಾಯ್ಸ್" ಇಂತಹ ಸಂಸ್ಥೆಗಳಲ್ಲೊಂದು.

ಈ ಎಲ್ಲ ಸಂಘಟನೆಗಳು ಹೊಂದಿರುವ ವಿದೇಶೀ ನಂಟನ್ನು ಪತ್ತೆ ಹಚ್ಚಿ ಅವನ್ನು ನಿವಾರಿಸುವ ಬದಲು ಆಡಳಿತ ಪಕ್ಷ ಅವುಗಳನ್ನು ಓಲೈಸಿಕೊಳ್ಳಲು ಪ್ರಯತ್ನಿಸುತ್ತಿದೆ, ಬೆಂಗಳೂರಿನ ಏಶಿಯನ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್‌ನ ಎಂ. ವಿ. ರಾಜಶೇಖರನ್ ಎಂಬವರನ್ನು ಇತ್ತೀಚೆಗೆ ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳಲಾಗಿದೆ. ಇತರ ವಿರೋಧ ಪಕ್ಷಗಳೂ ಇಂತಹ ಹಲವಾರು ವಿದೇಶೀ ನೆರವು ಪಡೆಯುವ ಸಂಸ್ಥೆಗಳ ವ್ಯಕ್ತಿಗಳಿಗೆ ತಮ್ಮಲ್ಲಿ ಆಶ್ರಯ ನೀಡುತ್ತಿವೆ.

ಏಳನೇ ಯೋಜನೆಯಲ್ಲಿ

"ಏಳನೇ ಯೋಜನೆಯ ಅನುಷ್ಠಾನದಲ್ಲಿ ಗ್ರಾಮಾಂತರ ಪ್ರದೇಶಗಳನ್ನೂ ಒಳಗೊಳ್ಳುವಂತೆ ಸ್ವಯಂಸೇವಾ ಸಂಸ್ಥೆಗಳನ್ನು ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳಲು ಯೋಜಿಸಲಾಗಿದೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಲ್ಲಿ ಸ್ವಯಂಸೇವಾ ಸಂಸ್ಥೆಗಳು ವಹಿಸುವ ಸಹಾಯಕ ಪಾತ್ರವನ್ನು ಬಡತನ ನಿರ್ಮೂಲನ ಮತ್ತು ಕನಿಷ್ಟ ಅಗತ್ಯತೆಯ ಪೂರೈಕೆಯ ವಿವಿಧ ಕಾರ್ಯಕ್ರಮಗಳಲ್ಲಿ ಇಂತಹಸಂಸ್ಥೆಗಳ ಕೊಡುಗೆಯನ್ನು ಮೆಚ್ಚಿಕೊಳ್ಳಬೇಕಾಗಿದೆ" ಎನ್ನಲಾಗಿದೆ.

ಹೀಗೆ ಈ ಸಂಶಯಾಸ್ಪದ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವುದು. ಸರಕಾರದ ಅಧಿಕೃತ ನಿಲುವೆಯಾಗಿಬಿಟ್ಟ ಮೇಲೆ ಉಳಿವದ್ದೇನು ? ಸರಕಾರದ ವಿವಿಧ ಇಲಾಖೆಗಳ ಆಶ್ರಯದಲ್ಲಿ ಇಂತಹ ಅನೇಕ ಸ್ವಯಂಸೇವಾ ಸಂಸ್ಥೆಗಳ ಸಮ್ಮೇಳನಗಳು ನಡೆದು ಯೋಜನೆಯ ಗುರಿಸಾಧನೆ ಮತ್ತು ಅವುಗಳಿಗಾಗಿ ವೆಚ್ಚ ಮಾಡಬೇಕಾದ ಹಣವನ್ನು ಯಾವ ಯಾವ ಸೇವಾ ಸಂಸ್ಥೆಗಳಿಗೆ ವಹಿಸಿಕೊಡಬೇಕೆಂಬ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕೇಂದ್ರ ಸರಕಾರದ ಗ್ರಾಮಾಂತರ ಅಭಿವೃದ್ಧಿ ಸಚಿವಾಲಯವು ಪೀಪಲ್ಸ್ ಆಕ್ಷನ್ ಫಾರ್ ಡೆವಲಪ್‌ಮೆಂಟ್ (ಇಂಡಿಯಾ) ಮತ್ತು ಕೌನ್ಸಿಲ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ರೂರಲ್ ಟೆಕ್ನಾಲಜಿ (CART) ಎಂಬ ಸ್ವಯಂಸೇವಾ ಸಂಸ್ಥೆಗಳನ್ನು ಸ್ವಾಯತ್ತ ಸಂಸ್ಥೆಗಳಾಗಿ ಪರಿಗಣಿಸಿ ಅವುಗಳಿಗೆ ತಮ್ಮ ಕೈಕೆಳಗಿನ ಇನ್ನೂ ಅನೇಕ ಸಂಸ್ಥೆಗಳಿಗೆಹಣಪಾವತಿ ಮಾಡುವ ಹೊಣೆಗಾರಿಕೆಯನ್ನು ಒಪ್ಪಿಸಿದೆ. ಪಾಡಿ (ಪಿ ಎ. ಡಿ. ಐ.) ಎಂಬ ಸರಕಾರೀ ಸಂಸ್ಥೆ ವಿದೇಶದಿಂದ ಹಣ ತಂದು ಭಾರತದಲ್ಲಿ ಅದನ್ನು ವಿತರಿಸುವ ಕೆಲಸವನ್ನು ತಾನೇ ಮಾಡುತ್ತಿದೆ. ಸರಕಾರಕ್ಕೆ ಈ ಬಗ್ಗೆ ಯಾವ ಕಾಳಜಿ ಇಲ್ಲ, ಯಾಕೆಂದರೆ ಡಾಲರುಗಳು ಹೇಗಾದರೂ ಬರುತ್ತಿವೆಯಲ್ಲ !

ಅಪಾಯಕಾರಿ

ಈ ಸಂಶಯಾಸ್ಪದ ಸಂಘಗಳುತಮ್ಮ ಕುಕೃತ್ಯವನ್ನು ಈ ವರೆಗೆ ತಮ್ಮ ಪಾಲಿಗೆ ತಾವೇ ಮಾಡಿಕೊಂಡಿದ್ದರೆ ಈಗ ಸರಕಾರದ ನೆರವಿನೊಂದಿಗೆ ಅದನ್ನು ನಡೆಸಬಹುದಾಗಿದೆ. ರಾಜೀವ್ ಗಾಂಧಿಯವರ ಖಾಸಗಿ ಕ್ಷೇತ್ರದ ಸಿದ್ಧಾಂತಕ್ಕೆ ಇದು ಸರಿ ಹೊಂದುತ್ತಿದೆ. ಇನ್ನು ಮುಂದೆ ಯೋಜನೆಗಳ ಅನುಷ್ಠಾನದಲ್ಲಿ ಸರಕಾರ ಪೂರ್ಣ ಜವಾಬ್ದಾರಿ ಹೊರಬೇಕಾಗಿಲ್ಲ. ಖಾಸಗಿ ಸ್ವಯಂಸೇವಾ ಸಂಸ್ಥೆಗಳೂ ಸಂಶಯಾಸ್ಪದ ಚಾರಿತ್ರ್ಯವಿರುವ ಸಂಸ್ಥೆಗಳೂ ಆ ಜವಾಬ್ದಾರಿಯನ್ನು ಭಾಗಶಃ ವಹಿಸಿಕೊಳ್ಳುತ್ತವೆ! ಬಡತನ ನಿವಾರಣೆ ಮತ್ತು ಗ್ರಾಮಾಂತರ ಅಭಿವೃದ್ಧಿಯ ಯೋಜನೆಗಳಲ್ಲಿ ಭಾರತ ಸರಕಾರ ಮತ್ತು ವಿದೇಶೀ ನೆರವಿನ ಸೇವಾ ಸಂಸ್ಥೆಗಳು ಪಾಲುದಾರರಾಗಬಹುದು !

ಆಸಕ್ತ ವಲಯಗಳು ಮತ್ತು ಸಾಮ್ರಾಜ್ಯಶಾಹಿಯ ಸಿದ್ಧಾಂತವನ್ನು ಗಿಳಿಪಾಠ ಒಪ್ಪಿಸುವ ಮಂದಿಗೆ ಇವೆಲ್ಲ ತುಂಬಾ ಸ್ವಾಗತಾರ್ಹವೆನಿಸಿರಬಹುದು. ಆದರೆ ಈ ಕ್ರಮಗಳಿಂದಾಗಿ ಸಾಮ್ರಾಜ್ಯಶಾಹಿಗೆ ನಮ್ಮ ದೇಶದ ಆಗು ಹೋಗುಗಳಲ್ಲಿ ನೇರವಾಗಿ ಹಸ್ತಕ್ಷೇಪ ಮಾಡಲು ಅನುಕೂಲವಾಗುತ್ತಿದೆ. ಸಾಮ್ರಾಜ್ಯಶಾಹಿಯ ಪ್ರಭಾವ ಇನ್ನಷ್ಟು ಆಳವಾಗಿ ಬೇರೂರಲು ನೆರವಾಗುತ್ತದೆ. ಈ ಪ್ರವೃತ್ತಿಯ ವಿರುದ್ಧ ದೇಶಪ್ರೇಮಿ ಜನತೆ ನಿರಂತರ ಜಾಗ್ರತರಾಗಿದ್ದುಕೊಂಡು ಹೋರಾಟ ನಡೆಸಬೇಕಾದುದು ಅನಿವಾರ್ಯ.

○

ವಿ ವಿ ಧ ರಾ ಜ್ಯ ಗ ಳ ಲ್ಲಿ

ಕೇರಳ ;

" ಕರುಣಾಕರನ್ ಮಂತ್ರಿ ಮಂಡಲ ತೊಲಗಲಿ "

–ಕಾ|| ಇ. ಎಂ. ಎಸ್.

ಕರುಣಾಕರನ್ ಮಂತ್ರಿಮಂಡಲದ ಬಿಕ್ಕಟ್ಟು ಈಗ ಒಂದು ಸುದ್ದಿಯಾಗಿ ಉಳಿದಿಲ್ಲ. 4 ವರ್ಷದ ಹಿಂದೆ ಅಧಿಕಾರಕ್ಕೆ ಬಂದಾಗಿನಿಂದ ಒಂದಲ್ಲ ಒಂದು ಬಿಕ್ಕಟ್ಟಿನಲ್ಲಿ ನರಳುತ್ತಿರುವ ಈ ಮಂತ್ರಿಮಂಡಲ ಇಂದಿಗೂ ಉಳಿದಿರುವುದೇ ನಿಜವಾಗಿಯೂ ಸುದ್ದಿ. ಇದಕ್ಕೆ ಅತಿ ದೊಡ್ಡ ಕಾರಣ ಸಿ. ಪಿ. ಐ (ಎಂ) ನಾಯಕತ್ವದ ಎಡ ಪ್ರಜಾಪ್ರಭುತ್ವ ರಂಗ ಕೋಮುವಾದಿ–ಜಾತಿವಾದಿ ಪಕ್ಷಗಳೊಂದಿಗೆ ಮೈತ್ರಿಯನ್ನು ಮಾಡದೆ ಇರುವ ನಿರ್ಧಾರ ಮಾಡಿದ್ದು ಮತ್ತು ಏನಕೇನ ಪ್ರಕಾರೇಣ ಸರಕಾರ ಉರುಳಿಸುವ ರಾಜಕೀಯವನ್ನು ಸ್ಪಷ್ಟವಾಗಿ ನಿರಾಕರಿಸಿರುವುದು.

ಇತ್ತೀಚೆಗೆ ಭ್ರಷ್ಟಾಚಾರದ ಆಪಾದನೆ ಮೇಲೆ ರಾಜೀನಾಮೆ ನೀಡಿದ ಶ್ರೀ ಶ್ರೀನಿವಾಸನ್ ಅವರ ರಾಜೀನಾಮೆ ಒಂಬತ್ತನೆಯದೆಂದು ಹೇಳಲಾಗಿದೆ. ಒಂದು ವರ್ಷದ ಹಿಂದೆ "ಪಂಜಾಬ್ ಮಾದರಿ"ಯ ಆಂದೋಳನಕ್ಕೆ ಕರೆ ಕೊಟ್ಟ ಬಾಲಕೃಷ್ಣನ್ ಪಿಳ್ಳೆಯ ಅವಕಾರದಿಂದ ಆರಂಭವಾದ ತೀವ್ರ ಬಿಕ್ಕಟ್ಟು ಇಂದಿಗೂ ಮುಂದುವರಿಯುತ್ತಿದೆ 8 ತಿಂಗಳಿಂದ ಆಡಳಿತ ರಂಗದ "ಮುಖಭಂಗ" ರಿಪೇರಿ ಮಾಡಲು ಮಾಡುತ್ತಿರುವ ವಿವಿಧ ಸರ್ಕಸ್ಸುಗಳು (ಮಂತ್ರಿಮಂಡಲ ಪುನರ್ರಚನೆ ಇತ್ಯಾದಿ) ರಂಗದಲ್ಲಿ ಮತ್ತು ಕಾಂಗ್ರೆಸ್ (ಐ) ಒಳಗೆ ಹಿಂದೆಂದೂ ಅರಿಯದ ಪ್ರಮಾಣದ ಒಳಜಗಳ ಹುಟ್ಟಿಸುವಲ್ಲಿ ಮಾತ್ರ ಸಫಲವಾಗಿದೆ.

ಸಂಹಾರ ಕಾಣದ ಈ ನಿತ್ಯಬಿಕ್ಕಟ್ಟಿನಿಂದ ಕೇರಳದ ಜನತೆ ಬೇಸತ್ತಿದ್ದಾರೆ. ಈ ಸಂದರ್ಭದಲ್ಲಿ ಮೇ 11 ರಂದು ಸಭೆ ಸೇರಿದ ಎಡ–ಪ್ರಜಾಪ್ರಭುತ್ವ ರಂಗದ ಸಮಾವೇಶ ಕರುಣಾಕರನ್ ಮಂತ್ರಿಮಂಡಲ ವಿರುದ್ಧ "ಚಾರ್ಜ್ ಶೀಟ್" ತಯಾರಿಸಿದ್ದು, "ಕರುಣಾಕರನ್ ಮಂತ್ರಿಮಂಡಲ ತೊಲಗಲಿ" ಎಂದು ಕರೆ ನೀಡುವಲ್ಲಿ ಜನರ ಭಾವನೆಗಳಿಗೆ ದನಿಕೊಟ್ಟಿದೆ. ಇದರಲ್ಲಿ ಕರುಣಾಕರನ್ ಮಂತ್ರಿಮಂಡಲದ ಮುಖ್ಯ ಅಪರಾಧಗಳಾಗಿ–ಪ್ರಗತಿ ವಿರೋಧಿ ಶಕ್ತಿ ಮತ್ತು ಭಾವನೆಗಳಿಗೆ ಕುಮ್ಮಕ್ಕು "ಬಹುಮತೀಯ" ಮತ್ತು "ಅಲ್ಪಮತೀಯ" ಕೋಮುವಾದಿ ಹಾಗೂ "ಮುಂದುವರಿದ" ಮತ್ತು "ಹಿಂದುಳಿದ" ಜಾತಿವಾದಿ ಶಕ್ತಿಗಳೊಂದಿಗೆ ಮೈತ್ರಿ, ಪ್ರೋತ್ಸಾಹ–ಎಡ ಸರಕಾರಗಳ ಉತ್ತಮ ಕ್ರಮಗಳ ರದ್ದು ಮತ್ತು ಈ ಮಂತ್ರಿಮಂಡಲದ ಲಾಂಛನವಾಗಿರುವ ಭ್ರಷ್ಟಾಚಾರ, ಇವನ್ನು ಸೇರಿಸಲಾಗಿದೆ. ಇವಲ್ಲದೆ ಪ್ರತಿ ಮಂತ್ರಿಯ ವಿರುದ್ಧ ಗುರುತರವಾದ ಪ್ರತ್ಯೇಕ ಅಪರಾಧಗಳ ಪಟ್ಟಿಯನ್ನೇ ಮಾಡಿದ್ದು ಕನಿಷ್ಟ 4 ಮಂತ್ರಿಗಳ ರಾಜೀನಾಮೆಗೆ ಕರೆ ನೀಡಲಾಗಿದೆ. ಕೇಂದ್ರ ಸರ್ಕಾರದ ಅನಪೇಕ್ಷಣಿಯ ವ್ಯಕ್ತಿಗಳೆಂದು ಘೋಷಿಸಲ್ಪಟ್ಟಿರುವ ಇಬ್ಬರು ಕುವಾಯಿತಿ ರಾಷ್ಟ್ರೀಯರನ್ನು ಸರ್ಕಾರಿ ಅತಿಥಿಯಾಗಿ ಮೆರೆಸಿದ ಇಬ್ಬರು ಮುಸ್ಲಿಂ ಲೀಗ್ ಮಂತ್ರಿಗಳು ಇದು ಗೊತ್ತಿದ್ದು ತಮ್ಮ ಖುರ್ಚಿ ಭದ್ರತೆಯ ದೃಷ್ಟಿಯಿಂದ ಸುಮ್ಮನಿದ್ದ ಆಗಿನ ಗೃಹ ಮಂತ್ರಿ ವಯಲಾರ್ ರವಿಮತ್ತು ಮುಖ್ಯಮಂತ್ರಿ ಕರುಣಾಕರನ್ ಇವರು ಆ ನಾಲ್ಕು ಮಂತ್ರಿಗಳು.

ಬೂರ್ಜ್ವಾ ಪತ್ರಿಕೆಗಳಿಂದ ಸಿ.ಪಿ.(ಎಂ) ಪಕ್ಷದ "ಭಿನ್ನಮತೀಯರು" ಎಂದು ಕರೆಯಲ್ಪಟ್ಟಿರುವವರು ಪ್ರತಿಪಾದಿಸಿದ ರಾಜಕೀಯ ನೀತಿಯನ್ನು ಸಿ. ಪಿ. ಐ. (ಎಂ) ಅಂಗೀಕರಿಸಿದ್ದರೆ, ಇದೇ ರವಿ, ಮಣಿ, ಪಿಳ್ಳೆಗಳನ್ನೇ ಸರ್ಕಾರ ಉರುಳಿಸಲು ಸಹಾಯ ಕೇಳಬೇಕಾಗಿತ್ತು ಎಂದು ನೆನಪಿಸಿಕೊಳ್ಳುವುದು ಸಮಯೋಚಿತ.

ಪಶ್ಚಿಮ ಬಂಗಾಳ :

ವಿಚ್ಛಿದ್ರಕಾರಿ ಶಕ್ತಿಗಳ ಪಿತೂರಿ ವಿಫಲ

ಪಶ್ಚಿಮ ಬಂಗಾಳದ ಎಚ್ಚತ್ತ ಜನತೆ ವಿಚ್ಛಿದ್ರಕಾರಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ಪಿತೂರಿಯೊಂದನ್ನು ವಿಫಲಗೊಳಿಸಿದ್ದಾರೆ. ಡಾರ್ಜಿಲಿಂಗ್ ಜಿಲ್ಲೆಯ 3 ಸಬ್‌ಡಿವಿಜನ್‌ಗಳಿರುವ ಪ್ರತ್ಯೇಕ "ಗೋರ್ಖಾಲ್ಯಾಂಡ್" ಬೇಡಿಕೆ ಮುಂದೂಡಿ ಇತ್ತೀಚೆಗೆ "ಚಳುವಳಿ" ನಡೆಯಿತು. ಇದನ್ನು ಸಂಘಟಿಸಿದ್ದು ಸಾಮ್ರಾಜ್ಯಶಾಹಿಗಳಿಂದ ಪ್ರೋತ್ಸಾಹ ಮತ್ತು ಧನಸಹಾಯ ಪಡೆದಿರುವ "ಗೋರ್ಖಾ" ರಾಷ್ಟ್ರೀಯ ವಿಮೋಚನಾ ರಂಗ" (GNLF) ಎಂಬ ಸಂಸ್ಥೆ.

ಈ ಪ್ರತ್ಯೇಕತಾವಾದಿಗಳಿಗೆ ಕಾಂಗ್ರೆಸ್ (ಐ) ಗುಟ್ಟಾಗಿ ಸಹಾಯ ಮಾಡುತ್ತಿದ್ದರೂ, ಮೊದಮೊದಲು ಸಾರ್ವಜನಿಕವಾಗಿ ಅರ್ಥ ಪೂರ್ಣ ಮೌನ ವಹಿಸಿತು. ಆದರೆ ಈ ಚಳುವಳಿಯ ಅಂಗವಾಗಿ GNLF 72 ಗಂಟೆಗಳ ಬಂದ್‌ಗೆ ಕರೆ ಕೊಟ್ಟಾಗ, ಎಡರಂಗ ಸರ್ಕಾರದ ಮೇಲೆ ಧಾಳಿ ನಡೆಸುವ ಈ ಸುವರ್ಣ ಸಂದರ್ಭವನ್ನು ಕಳೆದುಕೊಳ್ಳಲು ತಯಾರಿಲ್ಲದ ಕಾಂಗ್ರೆಸ್ (ಐ) ಡಾರ್ಜಿಲಿಂಗ್ ಜಿಲ್ಲಾ ಸಮಿತಿ ಹೊರಡಿಸಿದ ಹೇಳಿಕೆ GNLF ನ ನಿಲುವನ್ನು ಗಟ್ಟಿಗೊಳಿಸುವಂತಾಗಿತ್ತು.

ಈ ಬಂದ್ ಕಾಲದಲ್ಲಿ GNLF. ಕಾಂಗ್ರೆಸ್ (ಐ) ಮತ್ತು INTUC(I) ಜತೆ ಸೇರಿ ಲೂಟಿ, ಹಿಂಸಾಚಾರ ಮತ್ತು ಸಿ ಪಿ ಐ (ಎಂ). DYFI ಕಾರ್ಯಕರ್ತರ ಮೇಲೆ ದಾಳಿ ನಡೆಸಲಾಯಿತು. ಇದನ್ನೆಲ್ಲಾ ಎದುರಿಸಿ ಸಿ ಐ ಟಿ ಯು ನೇತೃತ್ವದಲ್ಲಿ ಬಹುಸಂಖ್ಯಾತ ಚಹ ಎಸ್ಟೇಟ್‌ಗಳಲ್ಲಿ ಕೆಲಸ ಎಂದಿನಂತೆ ನಡೆದು, ಬಂದ್ ವಿಫಲಗೊಂಡಿತು. ಇದರಿಂದಾಗಿ ಈ ಚಳುವಳಿ ಶಣ್ಣಗಾಯಿತು.

ವಿಫಲವಾದ ಮುತ್ತಿಗೆ

ಇದರಿಂದ "ನಿರಾಶರಾಗದ" ಕಾಂಗ್ರೆಸ್ (ಐ) ತಮ್ಮ ಒಳ ಜಗಳಗಳನ್ನು ಪರಿಹರಿಸಲು ಮತ್ತು ಐಕ್ಯತೆ ಸಾಧಿಸಲು ಮೇ 21 ರಂದು ರೈಟರ್ ಬಿಲ್ಡಿಂಗ್‌ಗೆ (ಪ ಬಂಗಾಲದ ವಿಧಾನಸೌಧ) ಮುತ್ತಿಗೆಯ ಕಾರ್ಯಕ್ರಮ ಹಾಕಿಕೊಂಡಿತು ದೊಡ್ಡ ಬೂರ್ಜ್ವಾ ಪತ್ರಿಕೆಗಳಲ್ಲಿ ಈ ಚಳುವಳಿಯ "ಏಕ ಮತ್ತು ಹೇಗೆ"ಗಳ ಬಗ್ಗೆ ಜಾಹೀರಾತುಗಳ ಮೂಲಕ ಪ್ರಚಾರ ಮಾಡಲಾಯಿತು. ಇದರಲ್ಲಿ "ಕಾನೂನು ಮತ್ತು ವ್ಯವಸ್ಥೆ ಕೆಡುತ್ತಿರುವ" ಹಳೆ ಹಾಡೇ. ಮುಖ್ಯವಾಗಿತ್ತು ಇದರ ವಿರುದ್ಧ ಸಿ ಪಿ ಐ (ಎಂ) ರಾಜ್ಯ ಘಟಕ ತನ್ನ ದಿನ ಪತ್ರಿಕೆ "ಗಣ ಶಕ್ತಿ" ಮೂಲಕ, ಸಭೆ, ಮೆರವಣಿಗೆಗಳ ಮೂಲಕ ಪ್ರತಿ ಪ್ರಚಾರ ನಡೆಸಿತು. ರಾಜ್ಯದಲ್ಲಿ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಿಗಿಂತ ಕಾನೂನು ಮತ್ತು ವ್ಯವಸ್ಥೆಯು ಉತ್ತಮವಾಗಿದೆ ಎಂಬುದನ್ನು ಅಂಕೆಸಂಖ್ಯೆಗಳ ಮೂಲಕ ಸಿದ್ಧಪಡಿಸಿದ್ದಲ್ಲದೆ, ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲ ಸಂಗ್ರಹ ಕೇಂದ್ರದ ಅಸಹಕಾರವಿದ್ದರೂ ಪ್ರಜಾ ಪ್ರಭುತ್ವೀಕರಣ ಗೊಳಿಸಿರುವ ಎಡರಂಗದ ಸಾಧನೆಗಳನ್ನು ಒತ್ತಿ ಹೇಳಲಾಯಿತು. ನಿರುದ್ಯೋಗ ಮತ್ತು ಉದ್ಯೋಗವನ್ನು ಮೂಲಭೂತ ಹಕ್ಕು ಮಾಡಲು ನಿರಾಕರಿಸಿರುವ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಯ ಕಛೇರಿ ಇರುವ ಸೌತ್ ಬ್ಲಾಕ್‌ಗೆ ಈ ಮುತ್ತಿಗೆ ಹಾಕುವರೇ ಎಂದು ಕಾಂಗ್ರೆಸ್ (ಐ) ರಾಜ್ಯ ಘಟಕಕ್ಕೆ ಸವಾಲು ಹಾಕಲಾಯಿತು.

ಆರು ಅಂಶಗಳ ಸಂಘಟನಾ ಕಾರ್ಯಕ್ರಮ

ಮೇ 3–4, 1886 ರಂದು ನಡೆದ ಪಶ್ಚಿಮ ಬಂಗಾಳ ಸಿ. ಪಿ. ಐ (ಎಂ) ರಾಜ್ಯ ಸಮಿತಿ ಸಭೆ ಸೇರಿ ಪಶ್ಚಿಮ ಬಂಗಾಳದಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ಬೆಳವಣಿಗೆ ಒಂದು ಕೋಟಿ ಸದಸ್ಯ ಸಂಖ್ಯೆಯನ್ನು ದಾಟಿರುವುದನ್ನು ಗುರುತಿಸಿ ಪಕ್ಷವನ್ನು ಬಲಪಡಿಸಲು, ರಾಜ್ಯದ ರಾಜಕೀಯದಲ್ಲಿ ಗಣನಾತ್ಮಕ ಬದಲಾವಣೆಯನ್ನು ತರಲು ಸಂಘಟನಾ ಗುರಿಯೊಂದನ್ನು ರೂಪಿಸಿತು. ರಾಜ್ಯಸಮಿತಿಕಾರ್ಯದರ್ಶಿ ಮತ್ತು ಪಾಲಿಟ್‌ಬ್ಯೂರೋ ಸದಸ್ಯ ಕಾ|| ಸರೋಜ್ ಮುಖರ್ಜಿ ಪತ್ರಿಕಾ ಹೇಳಿಕೆಯಲ್ಲಿ ಆರು ಅಂಶದ ಈ ಸಂಘಟನಾ ಕಾರ್ಯಕ್ರಮವನ್ನು ಘೋಷಿಸಿದರು. ಘೋಷಿಸಲ್ಪಟ್ಟ 6 ಅಂಶಗಳ ಕಾರ್ಯಕ್ರಮ ಈ ಕೆಳಗಿನಂತಿದೆ.

ಜೂನ್ 15 ರ ಮುನ್ನಿಸಿಪಲ್ ಮತ್ತು ಫೆಬ್ರುವರಿಯಲ್ಲಿ ಯೋಜಿಸಿರುವ ವಿಧಾನಸಭೆ ಚುನಾವಣೆಗಳಿಗೆ ಪೂರ್ವಭಾವಿ ಸಿದ್ಧತೆಯ ಪ್ರಚಾರ ಮತ್ತು ಯುದ್ಧ–ಶಾಂತಿ, ದೇಶದ ಐಕ್ಯತೆ, ಜನರ ಸಮಸ್ಯೆಗಳ ಬಗ್ಗೆ ಪ್ರಚಾರ ಪ್ರಕ್ಷೋಭೆ.

ಜನವಿರೋಧಿ ಕಾಂಗ್ರೆಸ್ (ಐ)ಯ ಧೋರಣೆಗಳನ್ನು ಬಯಲು ಮಾಡುವ ರಾಜಕೀಯ ಪ್ರಚಾರ ಮತ್ತು ಇದಕ್ಕೆ ಒಂದು ಲಕ್ಷ ಪ್ರಸಾರ ಪಡೆದ "ಗಣಶಕ್ತಿ" ಮುಂಜಾನೆ ದೈನಿಕದಬಳಕೆ (ಇಲ್ಲಿಯ ವರೆಗೆ ಸಂಜೆ ದೈನಿಕವಾಗಿದ್ದಾಗ ಕೇವಲ ಮೂವತ್ತು ಸಾವಿರ ಪ್ರಸಾರವಿತ್ತು)

ರಾಜ್ಯಸರ್ಕಾರದಿಂದ ಹಿಡಿದು ಗ್ರಾಮ ಪಂಚಾಯತ್‌ಗಳ ವರೆಗೆ ಎಲ್ಲಾ ಹಂತಗಳಲ್ಲಿ ಆಡಳಿತವನ್ನು ಉತ್ತಮ ಪಡಿಸುವಿಕೆ.

ಪಕ್ಷದ ಎಲ್ಲಾ ಸದಸ್ಯರಿಗೆ ವ್ಯಾಪಕ ರಾಜಕೀಯ ಶಿಕ್ಷಣ.

ಎಲ್ಲಾ ಹಂತಗಳಲ್ಲಿ ಪಕ್ಷದ ಸದಸ್ಯರ ಪೂರ್ಣಾವಧಿ ಕಾರ್ಯಕರ್ತರ ಕೆಲಸದ ಉಸ್ತುವಾರಿ ಪರಿಶೀಲನೆ ಕಟ್ಟುನಿಟ್ಟಾಗಿ ಜಾರಿ.

ಪಕ್ಷದ ಸಾಮೂಹಿಕ ಸಂಘಟನೆಗಳನ್ನು ಹೆಚ್ಚು ಹೆಚ್ಚಾಗಿ ಬೆಲೆ ಏರಿಕೆ ಹುಟ್ಟಿಸುಂತಾದ ರಾಜಕೀಯ ಚಳುವಳಿ ಪ್ರಚಾರಗಳಲ್ಲಿ ಪಾಲುಗೊಳ್ಳುವಂತೆ ಮತ್ತೆ ಕ್ರಮ.

ಇದು ಮುಂದಿನ 6 ತಿಂಗಳುಗಳಿಗೆ ಪಕ್ಷದ ಕಾರ್ಯಕ್ರಮವಾಗಿದ್ದು ಇದರ ಜಾರಿಯ ಬಗ್ಗೆ ರಾಜ್ಯ ಸಮಿತಿ ಪ್ರತಿ ತಿಂಗಳು ಪರಿಶೀಲನೆ ನಡೆಸುವುದು.

ಪಶ್ಚಿಮ ಬಂಗಾಳ :

(5ನೇ ಪುಟದಿಂದ)

ದಕ್ಷಿಣ ಆಫ್ರಿಕಾದಲ್ಲಿ ಸುಮಾರು 2000 ಬಹುರಾಷ್ಟ್ರೀಯಕಂಪೆನಿಗಳಿದ್ದು ಅವುಗಳಲ್ಲಿ ಸುಮಾರು 200 ಅಮೆರಿಕನ್ ಕಂಪೆನಿಗಳು. ನಮೀಬಿಯಾದಲ್ಲೂ 53 ಬಹುರಾಷ್ಟ್ರೀಯ ಕಂಪೆನಿಗಳು ಲಾಭ ಸೂರೆ ಹೊಡೆಯುತ್ತಿದ್ದು ಅವುಗಳಲ್ಲಿ 15 ಅಮೆರಿಕನ್ನರ ಕೈಯಲ್ಲಿವೆ. ಆರು ಸಾವಿರ ಅಮೆರಿಕನ್ ಕಂಪೆನಿಗಳು ದಕ್ಷಿಣ ಆಫ್ರಿಕಾದೊಂದಿಗೆ ವಾಣಿಜ್ಯ ಹಾಗೂ ಹಣಕಾಸಿನ ವ್ಯವಹಾರ ಹೊಂದಿವೆ. ದಕ್ಷಿಣ ಆಫ್ರಿಕಾದ ದೊಡ್ಡ ಬಂಡವಾಳಶಾಹಿಗಳು ಕೂಡ ಅಮೆರಿಕನ್ ಹಾಗೂ ಇತರ ಪಾಶ್ಚಿಮಾತ್ಯ ದೇಶಗಳ ಆರ್ಥಿಕತೆಯಲ್ಲಿ ಗಣನೀಯ ಪಾಲು ಪಡೆದಿದ್ದಾರೆ. ದಕ್ಷಿಣ ಆಫ್ರಿಕಾದ "ಆ್ಯಂಗ್ಲೋ–ಅಮೆರಿಕನ್"ಎಂಬ ಒಂದೇ ಕಂಪನಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ 32 ರಾಜ್ಯಗಳಲ್ಲಿ 106 ಕಂಪೆನಿಗಳ ಮೇಲೆ, ಕೆನಡಾದ 31 ಕಂಪೆನಿಗಳ ಮೇಲೆ ಹತೋಟಿಹೊಂದಿದೆ ಪಶ್ಚಿಮ ಯುರೋಪಿನಲ್ಲೂ ದಕ್ಷಿಣ ಆಫ್ರಿಕಾದ ಬಿಲಿಯಗಟ್ಟಲೆ ಡಾಲರುಗಳಷ್ಟು ಬಂಡವಾಳ ವಿನಿಯೋಗವಿದೆ. ಇದರಲ್ಲಿ ಅರ್ಧದಷ್ಟು ಬ್ರಿಟನ್ ಒಂದರಲ್ಲೇ ಇದೆ.

ಅಮೆರಿಕಾ ಹಾಗೂ ಇತರ ಬಂಡವಾಳಶಾಹೀ ದೇಶಗಳ ಆಳುವ ವಲಯಗಳು ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾದೊಂದಿಗೆ ತಮ್ಮ ವಾಣಿಜ್ಯ-ವ್ಯಾಪಾರ ಸಂಬಂಧಗಳನ್ನು ಕಾಪಾಡಿಕೊಳ್ಳಲು ಬಿಳಿಯ ಅಲ್ಪಸಂಖ್ಯಾತ ವರ್ಣದ್ವೇಷಿಗಳ ಮೇಲೇನೆ ಏಕೆ ಅವಲಂಬಿತವಾಗಬೇಕು ? ಏಕೆಂದರೆ ಈ ಬಂಡವಾಳಶಾಹಿಗಳು ಅಪಾರ ಲಾಭ ಸೂರೆಗೊಳ್ಳಲು ಸಾಧ್ಯವಾಗಿರುವುದು ಈ ವರ್ಣದ್ವೇಷಿಗಳ ಫ್ಯಾಸಿಸ್ಟ್ ಆಳ್ವಿಕೆಯಿಂದಾಗಿ ಅವರಿಗೆ ಅತ್ಯಂತ ಅಗ್ಗ ಬೆಲೆಯಲ್ಲಿ ಕರಿಯರ ದುಡಿಯುವ ಶಕ್ತಿಯನ್ನು ಕೊಳ್ಳಲು ಅವಕಾಶ ದೊರೆತಿರುವುದರಿಂದಾಗಿಯೇ. ನಮೀಬಿಯಾದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ವ್ಯವಹಾರ ನಡೆಯುತ್ತಿರುವ 170 ಅಮೆರಿಕನ್ ಬಹುರಾಷ್ಟ್ರೀಯ ಕಂಪೆನಿಗಳು 1954–74 ರ ಅವಧಿಯಲ್ಲಿ ತಮ್ಮ ಬಂಡವಾಳದ ಮೇಲೆ 347.79 % ಆದಾಯ ಗಳಿಸಿವೆ. ಸಾಮ್ರಾಜ್ಯಶಾಹಿ ಶೋಷಣೆಯ ಬದ್ಧ ವಿರೋಧಿ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ ಹಾಗೂ SWAPO ವಿಮೋಚನಾ ಹೋರಾಟಗಳು ಸಫಲಗೊಂಡು ಆ ದೇಶಗಳಲ್ಲಿ ಜನಪರ ಸರಕಾರಗಳು ಅಧಿಕಾರಕ್ಕೆ ಬಂದರೆ ಇಷ್ಟೊಂದು ಲಾಭಕ್ಕೆ ಹೇಗೆ ತಾನೇ ಅವಕಾಶ ದೊರೆತೀತು ?

ಡೊನೇಷನ್-ಕ್ಯಾಪಿಟೇಷನ್‌ಗಳ ವಿರುದ್ಧ ಹೋರಾಟಕ್ಕೆ ಕರೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.)ನ ಪದಾಧಿಕಾರಿಗಳ ಸಭೆ ಬೆಂಗಳೂರಿನಲ್ಲಿ ನಡೆದು ರಾಜ್ಯ ಹಾಗೂ ಕೇಂದ್ರಗಳ ಶಿಕ್ಷಣ ರೀತಿಯ ಬಗ್ಗೆ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿದೆ.

ಜನತಾ ಸರ್ಕಾರವು ಕ್ಯಾಪಿಟೇಷನ್ ಡೊನೇಷನ್‌ನ ತಲೆಗಂದಾಯದಿಂದ ಸಾಮಾನ್ಯ ಜನತೆಯನ್ನು ರಕ್ಷಿಸುವ ಚುನಾವಣಾ ಪ್ರಣಾಳಿಕೆಯ ಮೇಲೆ ಅಧಿಕಾರಕ್ಕೆ ಬಂದರೂ, ಜಾತೀಯ, ಮತೀಯ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು, ವಿದ್ಯಾರ್ಥಿಗಳನ್ನು ಹೀರಿ ಹಿಪ್ಪೆ ಮಾಡುವ ಖಾಸಗಿ ಕಾಲೇಜುಗಳಿಗೆ, ಪಾಲಿಟೆಕ್ನಿಕ್, ಐ.ಟಿ.ಐ. ಗಳಿಗೆ ಅನುಮತಿ ನೀಡುತ್ತಾ ಬಂದಿದೆ. ಇಲ್ಲಿಯವರೆಗೆ 6 ಮೆಡಿಕಲ್ ಕಾಲೇಜುಗಳಿಗೆ ಈ ರೀತಿ ಅನುಮತಿ ದೊರೆತಿದೆ. ಡೊನೇಷನ್ ವಸೂಲಿ ನಿಷೇಧದ ಬಗ್ಗೆ ಹೈಕೋರ್ಟು ನೀಡಿದ ತಡೆಯಾಜ್ಞೆಯ ವಿಷಯದಲ್ಲಿ ಹೊಸ ಆಜ್ಞೆಯೊಂದನ್ನು ತರುವ ಶಿಕ್ಷಣ ಸಚಿವರ ಭರವಸೆ ಕೃತಿಗಿಳಿದಿಲ್ಲ.

ಈ ಬಗ್ಗೆ ರಾಜ್ಯಾದ್ಯಂತ ಆಂದೋಲನ ರೂಪಿಸಲು, ವಿದ್ಯಾರ್ಥಿ ಪೋಷಕರ ಸಮಾವೇಶಗಳನ್ನು ನಡೆಸಲು ಕರೆನೀಡಲಾಗಿದೆ. ಜೊತೆಗೆ ಇತರ ಸಮಾನ ಮನೋಭಾವದ ಸಂಘಟನೆಗಳು ಜೊತೆಸೇರಿ ಐಕ್ಯ ಚಳುವಳಿ ಮಾಡಲು ನಿರ್ಧರಿಸಲಾಗಿದೆ.

ಇದರ ಜೊತೆಗೆ ಕೇಂದ್ರ ನೂತನ ಶಿಕ್ಷಣ ನೀತಿಯನ್ನು ನಿರೋಧಿಸಿ ಚಳುವಳಿ ಮಾಡಲು ನಿರ್ಧರಿಸಿದೆ. ಕರ್ನಾಟಕ ಶಿಕ್ಷಣ ಮಸೂದೆ (1983) ಗೆ ವಿಳಂಬ ಮಾಡದೆ ರಾಷ್ಟ್ರಪತಿಯವರ ಅಂಕಿತ ಹಾಕಬೇಕೆಂದು ಒತ್ತಾಯಿಸಿದೆ ವಿಶ್ವವಿದ್ಯಾನಿಲಯ ಸೆನೆಟ್‌ಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳ ಆಯ್ಕೆಗಾಗಿ ಚುನಾವಣೆ ನಡೆಸಬೇಕೆಂದು ವಿದ್ಯಾರ್ಥಿ ಸಂಘಗಳನ್ನು ರಚಿಸಿಕೊಳ್ಳುವ ಪ್ರಜಾಸತ್ತಾತ್ಮಕ ಹಕ್ಕಿನ ಮೇಲೆ ದಾಳಿ ನಡೆಯುವುದರ ವಿರುದ್ಧ ರಕ್ಷಣೆ ನೀಡಬೇಕೆಂದು ಒತ್ತಾಯಿಸಿದೆ. ಡಾ ಎಚ್. ನರಸಿಂಹಯ್ಯ ಹಾಗೂ ಭರತ್ ಆಯೋಗಗಳು ವಿದ್ಯಾರ್ಥಿ ಸಂಘಟನೆಗಳ ಅಭಿಪ್ರಾಯ ಪಡೆಯದಿರುವುದನ್ನು ಖಂಡಿಸಿ ಆಯೋಗಗಳ ಶಿಫಾರಸುಗಳ ಬಗ್ಗೆ ಮನವಿಯೊಂದನ್ನು ಅರ್ಪಿಸಲು ನಿರ್ಧರಿಸಲಾಗಿದೆ.

ರಾಜ್ಯಮಟ್ಟದ ಅಧ್ಯಯನ ಸಮಾರಂಭವೊಂದನ್ನು ಮೈಸೂರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಆರಾಧ್ಯ ತಿಳಿಸಿದ್ದಾರೆ.

○

ರೈತ ಕಾರ್ಮಿಕರ ಹೋರಾಟಗಳ ಮೇಲೆ ಧಾಳಿ

1(ನೆಯ ಪುಟದಿಂದ)

ಇನ್ನು ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಹೋರಾಟ ನಡೆಸುವಾಗ ಪೋಲಿಸರು ಮಧ್ಯಪ್ರವೇಶಿಸುವುದಿಲ್ಲವೆಂದು ಹೇಳಿದ್ದು ಕಾರ್ಯತಃ ತದ್ವಿರುದ್ಧವಾಗಿದೆ. ಯಾವುದೇ ಟಿ.ಯು. ಮುಂದಾಳನ್ನು ಕೇಳಿದರೆ ಈ ಮಾತು ಸ್ಪಷ್ಟವಾಗುವುದು. ಬೆಂಗಳೂರಿನಲ್ಲಂತೂ ಇದು ಬೀದಿಮಾತಾಗಿದೆ. ಸಾವಿರಾರು ಚಿಕ್ಕ ದೊಡ್ಡ ಫ್ಯಾಕ್ಟರಿಗಳು ಮುಚ್ಚಿ ಕಾರ್ಮಿಕರು ಬೀದಿ ಪಾಲಾದಾಗ, ಅಂತಹ ಕಾರ್ಮಿಕರು ಹೋರಾಟ ಮಾಡಿ ತಮ್ಮ ಜೀವನದ ಹಕ್ಕನ್ನು ಸಾಧಿಸಲು ಪ್ರಯತ್ನಿಸಿದಾಗ, ಅವರ ಹೋರಾಟದ ಪ್ರಭಾವದಿಂದ ಮಾಲಕರನ್ನು "ಸಂಪೂರ್ಣವಾಗಿ" ರಕ್ಷಿಸುವ— ಯಾವುದೇ ಅನ್ಯಾಯದ ಕಾನೂನು ಬಾಹಿರ ಕೆಲಸವನ್ನು ಮಾಲಕರು ಮಾಡಿದರೂ–ಕೆಲಸವನ್ನು ಪೋಲಿಸರು ಮಾಡುತ್ತಿದ್ದಾರೆ. ಪರಿಣಾಮವಾಗಿ, ಎಲ್ಲ ಆರ್ಥಿಕ ಹೊರೆಗಳನ್ನು ಕಾರ್ಮಿಕರ ಮೇಲೆ ಹಾಕಲು ಮಾಲಕರಿಗೆ ಬಹಳ ಸುಲಭವಾಗಿದೆ. ಪೋಲೀಸರಿಗೆ ಹಣಕೊಟ್ಟು, ಅವರನ್ನು ರಕ್ಷಣೆಗೆ ಕರೆದು ಕಾರ್ಮಿಕರ ಹಕ್ಕು–ಕಾರ್ಮಿಕರ ಹಕ್ಕು.... ಕೇಳುವವರೇ ಇಲ್ಲ ಮೈಸೂರು ಮಿಲ್ಲಿನ ಕಾರ್ಮಿಕರ ಸ್ಥಿತಿ ನೋಡಿದರೆ ಸಾಲದೇ ? ಮೈಸೂರಿನಲ್ಲಿ ನಡೆದ "ಮಹೇಂದ್ರ ಮತ್ತು ಮಹೇಂದ್ರ" ಹೋರಾಟದ ವೇಳೆ ಪೋಲೀಸರು ವರ್ತಿಸಿದ ರೀತಿ......

ಬಳ್ಳಾರಿಯ ಹೂವಿನಹಡಗಲಿ, ಹರಪನಹಳ್ಳಿ ಈ ಭಾಗಗಳಲ್ಲಿ ಲಂಬಾಣಿಗಳು ನಡೆಸಿದ "ಬಂಜರು ಭೂಮಿ" ಹೋರಾಟದ ವೇಳೆ ಪೋಲೀಸಿನವರು ವರ್ತಿಸಿದ ರೀತಿ, "ಹಮಾಲಿಗಳು" ನಡೆಸಿದ ಮುಷ್ಕರದ ವೇಳೆ ಪೋಲೀಸರ "ಜಬರ್‌ದಸ್ತು ವರ್ತನೆ", ವಿದ್ಯಾರ್ಥಿಗಳ ಮುಷ್ಕರಗಳ ಸಂದರ್ಭದಲ್ಲಿ "ವಿದ್ಯಾರ್ಥಿಗಳನ್ನು ವಿದ್ಯಾರ್ಥಿ ಮುಖಂಡರನ್ನು ಅಲ್ಲಿನ ಸಬ್‌ಇನ್‌ಸ್ಪೆಕ್ಟರ್ ಕಂಡುಕೊಂಡ ವಿಧಾನ" ಇತ್ಯಾದಿ ತೀರಾ ಖಂಡನೀಯ.

ಕುದುರೆ ಮೋತಿ ಪ್ರಕರಣದಲ್ಲಿ ಪೋಲಿಸರು ಜನತಾದ ಎಂ. ಎಲ್. ಎ. ರಾಯರೆಡ್ಡಿಯವರ ಜೊತೆಗೂಡಿ ಹೇಗೆ "ಅಮಾನುಷ ಮಾನಹರಣಕ್ಕೆ ತುತ್ತಾದ ಸ್ತ್ರೀಗೆ ಹೇಗೆ ರಕ್ಷಣೆ ಬೇಡಿದಾಗಲೂ ರಕ್ಷಣೆ ಕೊಡಲಿಲ್ಲವೆಂಬುದು ಜನಜನಿತವಷ್ಟೆ.

ಇತ್ತೀಚಿಗೆ ರಾಯಚೂರು ಜಿಲ್ಲೆಯಲ್ಲಿ ಹಲವಾರು ಘಟನೆಗಳನ್ನು ಪರಿಶೀಲಿಸಿದರೆ ಪೋಲಿಸರು ಕೆಳಮಟ್ಟಗಳಲ್ಲಿ ರಾಜಕೀಯದ ಕೆಲವು ಪುಡಾರಿಗಳ ಕೈಯಲ್ಲಿದ್ದಾರೋ ಅಥವಾ ಮೇಲಿನ ಮಂತ್ರಿ ಮತ್ತು ಅಧಿಕಾರಿಗಳ ಕೈಕೆಳಗಿದ್ದಾರೊ ಎಂಬುದು ಸಂಶಯಾಸ್ಪದವಾಗಿದೆ. ಉದಾಹರಣೆಗೆ, ಮಾನ್ವಿಯಲ್ಲಿ ಸಂಭವಿಸಿದ "ಸಾಮೂಹಿಕ ಸ್ತ್ರೀಯರ ಮಾನಹಾನಿ"ಯ ಘಟನೆಯ ವೇಳೆ ಪೋಲಿಸರು ನಡೆದ ವಿಧಾನ ಹಲವು ತಾಲೂಕು ಕೇಂದ್ರಗಳಲ್ಲಿ ಮುಗ್ಧ ರೈತರು "ಬರಗಾಲದ ಕಾಮಗಾರಿಗಳಿಗಾಗಿ, ಈ ವಿಷಯದ ಭ್ರಷ್ಟಾಚಾರದ ವಿರುದ್ಧ" ಪ್ರತಿಭಟನೆ ಮಾಡಿದಾಗ —ಮಾನ್ವಿ, ಕುಷ್ಟಗಿ, ಯಲಬುರ್ಗಿ ಇತ್ಯಾದಿ ಕಡೆಗಳಲ್ಲಿ ಪೋಲಿಸರು ಮಾಡಿದ ಲಾಠಿ ಚಾರ್ಜು, ಅರೆಸ್ಟು, ಮರ್ದನ....

ಇವುಗಳಲ್ಲಿ ಯಲಬುರ್ಗಿ ತಾಲೂಕಿನಲ್ಲಿ ಇತ್ತೀಚೆಗೆ ಬರಗಾಲದ ಪರಿಹಾರ ಕೆಲಸಗಳನ್ನು ಆರಂಭಿಸಿ ಅತ್ಯಂತ ಅಧಿಕ ಬರಗಾಲಕ್ಕೆ ತುತ್ತಾದ ತಾಲೂಕಿನವರು ಪ್ರತಿಭಟಿಸಿದಾಗ, "ತಾವು ಸತ್ಯಾಗ್ರಗಳಿಗೆ ಕೊಟ್ಟ ಮಾತನ್ನು ಮೀರಿ, ಅವರ ಮೇಲೆ ಅಮಾನುಷ ರೀತಿಯಲ್ಲಿ ದಬ್ಬಾಳಿಕೆ ಮಾಡಿದ್ದು" ತೀರಾ ಖಂಡನೀಯ.

"ಪ್ರಾಂತ ರೈತ ಸಂಘವನ್ನು ಪುಡಿಮಾಡುವುದೇ ನಮ್ಮ ಉದ್ದೇಶವೆಂದು ಆ ತಾಲೂಕಿನ ಹಲವು ಹಳ್ಳಿಗಳಿಗೆ ನುಗ್ಗಿ ರೈತರನ್ನು ಹೊಡೆದು, ಅವರ ಮುಂದಾಳುಗಳನ್ನು ಬೀದಿಯಲ್ಲಿ ಬಲಿತೆಗೆದು.... ಭಯವುಂಟು ಮಾಡಿದ್ದನ್ನು ಕೇಳಿದಾಗಲೇ ರೊಚ್ಚಿಗೆ ಏಳುವ ಪರಿಸ್ಥಿತಿ. ಇನ್ನೂ ಕಣ್ಣಾರೆ ಕಂಡವರು ಇಡೀ ನಗರ ಜನರು ರೊಚ್ಚಿಗೆದ್ದರೆ ಆಶ್ಚರ್ಯವೇನು ?"

ಇದರಿಂದೆಲ್ಲಾ ರಾಮಕೃಷ್ಣ ಹೆಗಡೆಯವರ ಪೋಲಿಸು ನೀತಿ ಸಂಪೂರ್ಣವಾಗಿ ಜನವಿರೋಧಿಯಾಗಿದೆ ಎಂಬ "ಅನುಮಾನ"ಕ್ಕೆ ಖಂಡಿತವಾಗಿ ನಾವು ಬರಲಿಲ್ಲ, ಬರುವುದಿಲ್ಲ.

ಆದರೆ ಕೆಳಸ್ತರಗಳಲ್ಲಿ ಹಲವಾರು ಕಾರಣಗಳಿಂದ, ಭ್ರಷ್ಟಾಚಾರ, ರಾಜಕೀಯ ಪುಢಾರಿಗಳ ಮಧ್ಯವೇಶ, ಇಡೀ ಆಡಳಿತೆಯ "ಬೆಳೆಯುತ್ತಿರುವ ಕಡಿವಾಣ ರಹಿತ ಇಳಿತ"......ಪೋಲಿಸು ದಳಗಳೂ ಮತ್ತು ಪೋಲಿಸು ಸ್ಟೇಷನುಗಳು ಜನಸಾಮಾನ್ಯರಿಗೆ ರಕ್ಷಣಾ ಕವಚವಾಗುವ ಬದಲು ಭಕ್ಷಕರಾಗುವತ್ತ ಸಾಗುತ್ತಿವೆ... ಹಿಂದಿನ ಕಾಂಗ್ರೆಸ್ಸ್ ಆಡಳಿತೆಯ ಜಾಡಿನಲ್ಲಿ....

ನಾವು ಜನತಾ ಸರಕಾರವನ್ನು ಈ ಕುರಿತು ಎಚ್ಚರಿಸಬಯಸುತ್ತೇವೆ. ಬೇಗನೇ ವಿಮರ್ಶಿಸಿ "ಜನತೆಗೆ ಭರವಸೆ ಕೊಟ್ಟ ಹಾದಿಯಲ್ಲಿ ಪೋಲಿಸು ಧೋರಣೆ ಸರಿಯುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.

ಬಂಗಾರಪ್ಪನವರ ಮೇಲೆ ಕೋರ್ಟಿನ ಆಪಾದನೆ

(3 ನೆಯ ಪುಟದಿಂದ)

ಅವರು ಅದನ್ನು ಸ್ವಂತ ಸಾಗುವಳಿ ಮಾಡುತ್ತಿರಲಿಲ್ಲ. ಅದನ್ನು ಒಕ್ಕಲುಗಳ ಮೂಲಕ ಸಾಗುವಳಿಯಾಗುತ್ತಿತ್ತು.

ಆ ಭೂಮಿಗೆ ಒಕ್ಕಲುಗಳು ಮುಗುರು ಲೇಲವು ಮತ್ತು ಬಸಪ್ಪ ಎಂಬುವವರು "ಸ್ವಾಧೀನತಾ ಹಕ್ಕು"ಗೆ ಟ್ರಿಬ್ಯೂನಲ್ ಅರ್ಜಿ ಹಾಕಿದ್ದರು. ಶ್ರೀಮಾನ್ ಬಂಗಾರಪ್ಪನವರು ಟ್ರಿಬ್ಯೂನಲ್ ಸದಸ್ಯರಾಗಿದ್ದಾಗ ಅವರ ಅರ್ಜಿಯನ್ನು ಸದ್ರಿ ಅರ್ಜಿದಾರರ ಹೇಳಿಕೆಗಳನ್ನು ರಿಕಾರ್ಡು ಮಾಡಿ ವಜಾ ಮಾಡಲಾಗಿತ್ತು.

ಅನಂತರ ಶ್ರೀಮಾನ್ ಬಂಗಾರಪ್ಪನವರು ಆ ಭೂಮಿಯನ್ನು ಖರೀದಿ ಮಾಡಿಸಿಕೊಂಡರು.

ಜಡ್ಜ್ ಶ್ರೀ ಬೋಪಣ್ಣನವರು ಭೂ ಟ್ರಿಬ್ಯೂನಲ್‌ನ ನಡವಳಿಕೆಯಲ್ಲಿ ಹಲವಾರು ದೋಷಗಳನ್ನು ಕಂಡು ಹಿಡಿದು; ಮುಖ್ಯವಾಗಿ ರಿಕಾರ್ಡುಗಳ ಆಧಾರದಲ್ಲಿ, ಅದು ಪುನರ್ ತನಿಖೆಗೆ ಟ್ರಿಬ್ಯೂನಲಿಗೆ ಹಿಂತಿರುಗಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಮಾನ್ ಬಂಗಾರಪ್ಪನವರ ಪರವಾಗಿ ವಕೀಲರು "ಯಾವುದೇ ಕಾರಣ ಕೊಡದೆ ಈ ಕೇಸನ್ನು ಬೇರೆ ಬೆಂಚಿಗೆ ರವಾನಿಸಬೇಕು" ಎಂದು ಅರ್ಜಿ ಹಾಕಿದರು. ಇಂತಹ ಸಂದರ್ಭದಲ್ಲಿ ಯಾಕೆ ಸುದ್ರಿ ಕೋರ್ಟಿನಲ್ಲಿದ್ದ ಕೇಸನ್ನು ಬೇರೆ ಬೆಂಚಿಗೆ ರವಾನಿಸಬೇಕೆಂಬುದಕ್ಕೆ ಸರಿಯಾದ ಕಾರಣ ಕೊಡುವುದು ಕಾನೂನು ರೀತ್ಯಾ ಅವಶ್ಯಕವಾಗಿದ್ದರೂ, ಶ್ರೀಮಾನ್ ಬಂಗಾರಪ್ಪನವರ ವಕೀಲರು ಯಾವುದೇ ಕಾರಣ ಕೊಡಲಿಲ್ಲ.

ಆದ್ದರಿಂದ ಜಡ್ಜ್ ಬೋಪಣ್ಣನವರು "ನಾನು ಈಗಾಗಲೇ 30000 ದಷ್ಟು ರಿಟ್ ಅರ್ಜಿಗಳನ್ನು ಟ್ರಿಬ್ಯೂನಲ್‌ಗಳ ಆಜ್ಞೆಗಳ ವಿರುದ್ಧ ಪರಿಗಣಿಸಿರುವಾಗ, ಈಗ ನನ್ನ ಮುಂದೆ ಬಂದಿರುಪ ಕೇಸಿನಲ್ಲಿ ಕೂಡಾ ರಿಕಾರ್ಡುಗಳ ಆಧಾರದಲ್ಲಿ ತೀರ್ಪು ಮಾಡಿದ್ದೇನೆ." ಎಂದು ಹೇಳಿ, ಶ್ರೀಮಾನ್ ಬಂಗಾರಪ್ಪನವರ ಮೇಲೆ ಯಾಕೆ ನನ್ನ ಕೋರ್ಟಿನ ನಿಂದನೆ ಮಾಡಿದ್ದಾರೆ ಎಂಬ ಕೇಸು ದಾಖಲೆ ಮಾಡಬಾರದು ಎಂದು ಕೇಳಿದ್ದಾರೆ.

ಕೇಸು ಜೂನ್ 15 ಕ್ಕೆ ಮುಂದುವರಿದಿದೆ.

ಈ ವಿಷಯದಲ್ಲಿ ನಾವು ಹೇಳಬಿಚ್ಛಿಸುವುದು ಇಷ್ಟೆ : ಶ್ರೀಮಾನ್ ಬಂಗಾರಪ್ಪನವರು ತಾವು "ಗಾಜಿನ ಮನೆಯಲ್ಲಿ ಕುಳಿತು ಇತರರ ಮೇಲೆ ಕಲ್ಲು ಬೀಸಾಡುತ್ತಿದ್ದಾರೆ" ಎಂದು.

ಅಲ್ಲದೆ, ಬಡವರ, ಗೇಣಿದಾರರ, ಹರಿಜನರ, ಹಿಂದುಳಿದವರ ಬಗ್ಗೆ........ ದಿನಾಲೂ ಕಣ್ಣೀರು ಸುರಿಸುತ್ತಿದ್ದೂ ಜನ ವಿಭಾಗಗಳ ಏಳಿಗೆಯು ತನ್ನಿಂದಲೂ, ತನ್ನ ಪಕ್ಷದಿಂದಲೂ ಮಾತ್ರ ಸಾಧ್ಯ ಎಂದು ದಿನಾಲೂ ಪ್ರಚಾರ ಮಾಡುತ್ತಿರುವವರು, ಹೀಗೆ ಮಾಡಬಹುದೇ ?

47 ಎಕ್ರೆ 1 ಗುಂಟೂ ಏನೂ ಅಲ್ಪಸ್ವಲ್ಪ ಸಣ್ಣ ಭೂಮಿಯ ತುಂಡು ಮಾತ್ರ ಅಲ್ಲ !

ಮಾನ್ವಿಯಲ್ಲಿ ಭೂ ಗ್ರಹಣ ಚಳುವಳಿ

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹರದನಹಳ್ಳಿಯಲ್ಲಿ 40 ವರ್ಷಗಳಿಂದ ಭೂರಹಿತ ಕೃಷಿಕೂಲಿಕಾರರು ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಭೂನ್ಯಾಯ ಮಂಡಳಿ, ಸುಳ್ಳು ದಾಖಲೆಗಳ ಆಧಾರದ ಮೇಲೆ ಕಿಷನ್‌ರಾವ್ ದೇಸಾಯಿ ಎಂಬ ಭೂಮಾಲೀಕ ಹಾಗೂ ಇತರರಿಗೆ ಮಂಜೂರು ಮಾಡಿದ್ದಾರೆ. ಈ ಬಗ್ಗೆ ಹಿಂದೆ ಭೂನ್ಯಾಯ ಮಂಡಳಿ ಕಾರ್ಯದರ್ಶಿಗಳಾದ ತಹಶೀಲ್ದಾರರಿಗೆ ಕಾಲುಜಾತಾ ಮಾಡಿ ಒಂದು ಮನವಿಯನ್ನು ಸಲ್ಲಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ಕ್ರಮವನ್ನು ಅಧಿಕಾರಿಗಳು ಕೈಗೊಳ್ಳದೆ ಭೂಮಾಲೀಕರಿಗೆ ತಮ್ಮ ಒತ್ತಾಸೆಯನ್ನು ಮುಂದುವರಿಸಿದರು. ಇದನ್ನು ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು, ಆ ಗ್ರಾಮದ ಭೂಹೀನರು ಹಾಗೂ ಸುತ್ತಮುತ್ತಲ ಗ್ರಾಮಗಳ ರೈತರ ಬೆಂಬಲದಿಂದ ದಿನಾಂಕ 25.5.86 ರಂದು 20 ನೇಗಿಲುಗಳನ್ನು ಹೂಡಿ ಉಳುಮೆ ಮಾಡುವ ಮೂಲಕ ಭೂ ಆಕ್ರಮಣ ಮಾಡಿದರು.

ಪೋಲಿಸರು ಈ ಭೂಹೀನ ಕೃಷಿ ಕೂಲಿಕಾರರ ಮೇಲೆ ಧಾಳಿ ಮಾಡಿ 150 ಜನರನ್ನು ಬಂಧಿಸಿ ಜಿಲ್ಲಾ ಕೇಂದ್ರಕ್ಕೆ ವರ್ಗಾಯಿಸಿದರು. ಈ ಆಕ್ರಮಣದ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಮಾನ್ವಿ ತಾಲೂಕು ಸಮಿತಿ ಅಧ್ಯಕ್ಷ ವೀರನಗೌಡ, ಕಾರ್ಯದರ್ಶಿ ಡಾ. ಬಾಲಚಂದ್ರ ಮತ್ತು ಜಿಲ್ಲಾ ಸಮಿತಿ ಸದಸ್ಯ ಲಿಂಗಪ್ಪ ಪೂಜಾರ ವಹಿಸಿದ್ದರೆಂದು ತಾಲೂಕು ಸಮಿತಿ ಕೋಶಾಧಿಕಾರಿ ವೆಂಕಟೇಶ ಮನಸಾಲಿ ತಿಳಿಸಿದ್ದಾರೆ.

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Sultanpet B-53 Phone : 75331
Editorial and managerial office: L-56, K. V. Temple Street,
Editor P. Ramachandra Rao
Managing Editor ; N. K. Upadhyaya